ಅಪರಂಜಿ

ಸಂಪುಟ-೧ ಫಾಲ್ಗುಣ ಮಾರ್ಚ ೧೯೮೪ ಸಂಚಿಕೆ-೬

(ತಿಳಿನಗೆಯ ಮಾಸಪತ್ರಿಕೆ)



ಈ ಸಂಚಿಕೆಯ ಲೇಖಕರು

ರಾ.ಶೇ.
ಆನಂದ್
ಅ. ಪ. ಹಾಸ್ಯಗಾರ್
ಶಿವಕುಮಾರ್
ರಾಮಿ
ತ್ರಿಪುರ
ಟಿ. ಸುನಂದಮ್ಮ
ಜ್ಯೋತ್ಸ್ನಾ ಕಾಮತ
ದಾಶರಥಿ ದೀಕ್ಷಿತ್
ಕೇಫ
ಬಿ.ಎಸ್. ಚಂದ್ರಶೇಖರ್
ಡಾ॥ ಕೆ. ಕೃಷ್ಣಮೂರ್ತಿ

ಸಂಪಾದಕ : ಆರ್. ಶೇಷಗಿರಿರಾವ್

ಎಚ್ ಇ ಟಿ

ಆಮದು ಬದಲು ಉತ್ಪಾದನೆಯಲ್ಲಿ

ರಾಷ್ಟ್ರೀಯ ಪ್ರಶಸ್ತಿ ವಿಜೇತರು

15 ಆಗಸ್ಟ್ 1981

ಆರ್.ಎಫ್.ಕೋ ಆಕ್ಸಿಲ್ ಕನೆಕ್ಟರ್, ಅಂತರ ರಾಷ್ಟ್ರೀಯ ಸೈನಿಕ ಸಾಮಗ್ರಿಗಳಿಗೆ

ಬಿಡಿ ಭಾಗಗಳು ಮತ್ತಿತರ ಅತಿ ನಿಖರ ಉತ್ಪಾದನೆಗಳು.

ದೇಶೀಯ ತಾಂತ್ರಿಕ ನೈಪುಣ್ಯತೆಯಿಂದ

ಆಮದು ಸರಕುಗಳಿಗೆ ಬದಲು ಉತ್ಪಾದನೆ

ನಮ್ಮ ಗುರಿ.

ಅಪರಂಜಿ

ಗೌರವ ಸಲಹೆಗಾರರು

ಶ್ರೀ ರಾ.ಶಿ.

ಶ್ರೀ ಅ.ರಾ.ಸೇ.

ಪ್ರಕಾಶಕರು ಮತ್ತು ಸಂಪಾದಕರು

ಶ್ರೀ ಶೇಷಗಿರಿ

ವಾರ್ಷಿಕ ಚಂದಾ : ರೂ. 25-00

ಮುದ್ರಣ

ಬೃಂದಾವನ ಮುದ್ರಣ, ಜಯನಗರ, ಮೈಸೂರು-14

ಮನವಿ

ಕೊರವಂಜಿ, ಅಪರಂಜಿಯೊಡನೆ ನಾಡಿಗೆ ಬಂದಿದ್ದಾಳೆ. ಕೊರವಂಜಿ ಬಳಗದವರು, ಹೊಸ ಲೇಖಕರೊಂದಿಗೆ ನಿಮಗಾಗಿ ತಿಳಿನಗೆಯ ಹೊನಲನ್ನು ಹರಿಸುತ್ತಾರೆ. ಸದ್ಯಕ್ಕೆ ಚಂದಾದಾರರಿಗೆ ಮಾತ್ರ ಅಪರಂಜಿ ಲಭ್ಯ. ವಾರ್ಷಿಕ ಚಂದಾ ರೂ. 25-00 ನೀವೂ, ನಿಮ್ಮ ಮಿತ್ರರೂ ಚಂದಾದಾರರಾಗಿರಿ, ಜಾಹಿರಾತು ಕೊಡಿ. ಲೇಖಕರೂ, ವ್ಯಂಗ್ಯ ಚಿತ್ರಕಾರರೂ ತಮ್ಮ ಕೃತಿಗಳನ್ನು ಕಳಿಸಿಕೊಡಲು ಪ್ರಾರ್ಥನೆ. ಅಪರಂಜಿ ನಿಮ್ಮದು. ಅದರ ಅಭಿವೃದ್ಧಿ ನಿಮಗೆ ಸೇರಿದ್ದು. ಚಂದಾ ಹಣವನ್ನು ಮನಿಆರ್ಡರ್ ಅಥವಾ ಡ್ರಾಫ್ಟ್ ಮೂಲಕ ಕಳಿಸಿಕೊಡಿ.

ಆರ್. ಶೇಷಗಿರಿರಾವ್

, ವಿಸ್ತರಣ.

ಚಿತ್ರದುರ್ಗ-೫೭೭೫೦೧

ಅಪರಂಜಿ

(ತಿಳಿನಗೆಯ ಮಾಸಪತ್ರಿಕೆ)

ಸಂಪುಟ-೧ ಫಾಲ್ಗುಣ-೧೯೮೪ ಸಂಚಿಕೆ-೬

ನಾನು ಮಂತ್ರವನ್ನರಿತಿದ್ದೇನೆ ಆತ್ಮವನ್ನಲ್ಲ — ನಾರದ

ರುಧಿರೋದ್ಗಾರಿ ಕೊನೆ
ಗೊಳ್ಳುತ್ತಿದೆ.
'ಅಪರಂಜಿ'ಯ ಅರ್ಧ
ವರ್ಷ ಕಳೆಯಿತು,
ಇದೀಗ ಮಿತ್ರರ,
ಅಭಿಮಾನಿಗಳ ದೆಸೆ
ಯಿಂದ 'ಅಪರಂಜಿ'
ಹೊಸರೂಪದಿಂದ
ಮುಕ್ತ ಮಾರುಕಟ್ಟೆಗೆ
ಬರುವ ಕಾಲ ಬಂದಿದೆ.
ಆರಂಭದ ದಿನಗಳಲ್ಲಿ
ಬೆಂಬಲಕೊಟ್ಟ ಎಲ್ಲ
ರಿಗೂ ಅಪರಂಜಿಯ
ಕೃತಜ್ಞತೆಗಳು.

—ಸಂಪಾದಕ

ಈ ಸಂಚಿಕೆಯಲ್ಲಿ

ರಮ್ಯರವರ ಮಂದಾರ ಧಾರಾವಾಹಿ ಮುಂದಿನ ಸಂಚಿಕೆಯಿಂದ

ಕಾ.ಶಿ.ಯವರಿಗೆ

—ಕಾ. ತೇ.

(ಜಿ. ಎಸ್. ಶಿವರುದ್ರಪ್ಪನವರ ಕ್ಷಮೆ ಕೋರಿ)

ಮನದಣಿಯೆ ಕೆಣಕಿದಿರಿ ಅಂದು ನೀವು
ನಗುನಗುತ ಕೇಳಿದೆನು ಅಂದು ನಾನು.
ಇಂದು ನಾ ಕೆಣಕಿದರೂ
ಅಂದಿನಂತೆಯೆ ಕುಳಿತು
ಕೇಳುವಿರಿ ನೀವಲ್ಲಿ
ಅದುವೆ ಸಾಕೆನಗೆ
ಕೆಣಕು ಬುದ್ಧಿಗೆ ಬೇಕೆ ಕಾರ್ಯಕಾರಣವು
ಎಲ್ಲರೂ ನಗಲೆಂದು
ನಾನು ಕೆಣಕುತಲಿರುವೆ
ಕೆಣಕುವುದು ಖುಷಿ ಕೊಡುವ
ತೆವಲು ನನಗೆ
ಸಿಡುಕುವವರಿಹರೆಂದು
ಮನದಣಿಯೆ ಕೆಣಕುವೆನು
ಯಾರು ಕಿವಿ ಹಿಂಡಿದರು
ನನಗಿಲ್ಲ ನೋವು
ದಿಲ್ ತುಂಬ ಖುಷಿ ತುಂಬಿ
ಮೈದುಂಬಿ ಕೆಣಕಿದೆನು ಇಂದು ನಾನು.

ಅಪರಂಜಿ ಕಿಡಿ

—ಆನಂದ್

---

1. ಹೆರಿಗೆ ಆಸ್ಪತ್ರೆಯಲ್ಲಿ ಹೆಣ್ಣುಮಕ್ಕಳ ಶಾಲೆ !

—ಸುದ್ದಿ

—ಸುದ್ದಿ ಅರ್ಥಗರ್ಭಿತವಾಗಿದೆ !

2. ಸುಳ್ಳು ವದಂತಿ ಹಬ್ಬಿಸುವವರನ್ನು ಬಂಧಿಸುತ್ತೇವೆ.

—(ಪೋಲಿಸ್ ಕಮಿಷನರ್ ಅವರ ಹೇಳಿಕೆ).

—ಪಾಪ, ಚುನಾವಣೆ ಆಶ್ವಾಸನೆಗಳನ್ನು ನೀಡುವವರ ಗತಿ ?

3. ಜನತಾ ಪಕ್ಷದ ಪತನ ಯತ್ನದಲ್ಲಿ ನಾನು ಭಾಗಿಯಲ್ಲ.

—(ಶ್ರೀ ಬೂಟಾಸಿಂಗ್)

—ಸ್ವಾಮಿ, ಇದೂ ಬೂಟಾಟಿಕೆ ಅಲ್ಲ ತಾನೆ ?

4. ದಿವಂಗತರಾಗಿದ್ದಾರೆ ಎನ್ನಲಾಗಿದ್ದ ಹಲವು ಹಿಂದೀ ಲೇಖಕರು ಜೀವಂತರಾಗಿದ್ದಾರಂತೆ.

—ಸುದ್ದಿ

—ಇದನ್ನು ಕೇಳಿ ಲೇಖಕರಿಗೆ ಸಂತೋಷವಾಗಿರಬೇಕು !

5. "ಬೆಂಗಳೂರು —ವಿಚಿತ್ರ ನಗರ ; ಜನರೆಲ್ಲ ವಾಹನಗಳನ್ನು ಸಾಲಾಗಿ ನಿಲ್ಲಿಸಿ, ನಡೆದೇ ಓಡಾಡುತ್ತಾರೆ !" ಅಂತ ಅಮೆರಿಕನ್ ಯಾತ್ರಿಯೊಬ್ಬ ತನ್ನ ಡೈರಿಯಲ್ಲಿ ಬರೆದನಂತೆ.

—ಆದಿನ ಬೆಂಗಳೂರು ಬಂದ್ !

6. 'ವಿಧಾನಸೌಧದ ಬಳಿ ಸದಾ ಧರಣಿ ಮಾಡೋರಿಗಾಗಿ ಒಂದು ಕಟ್ಟಡ ಕಟ್ಟಿದರೆ, ಡೇರೆಗಳಿಗೆ ವಿದಾಯ, ಸರ್ಕಾರಕ್ಕೂ ಆದಾಯ' ಅಂತ ಗೆಳೆಯರೊಬ್ಬರು ಬರೆದಿದ್ದಾರೆ.

7. ಅಪ್ಪಿಕೋ ಚಳುವಳಿ ನಾಡಿನ ಯುವಜನರಲ್ಲೂ ಜನಪ್ರಿಯವಾಗಬೇಕು.

—ಹೇಳಿಕೆ

—ಆ್ಹ !

8. ಕರ್ನಾಟಕದ ಅರಣ್ಯಗಳಲ್ಲಿ ಹುಲಿ, ಚಿರತೆಗಳನ್ನು ಎಣಿಸಲಾಗುತ್ತದೆ,

—ಸುದ್ದಿ

ಎಣಿಸೋರನ್ನ ಸರಿಯಾಗಿ ಎಣಿಸಿ ಕಳಿಸುತ್ತಾರೆ ತಾನೆ ?

ತಿಂಗಳ ಹಳೆಯ ಜೋಕು

—ಅ. ಪ. ಹಾಸ್ಯಗಾರ್

ತೌರುಮನೆಯಲ್ಲಿ ಬಹಳ ದಿನ ಝಾಂಡಾ ಊರಿ ಗಂಡನನ್ನು ಸತಾಯಿಸುತ್ತಿದ್ದೇನೆಂದು ಒಳಗೊಳಗೇ ಸಂತೋಷ ಪಡುತ್ತಿದ್ದ ಹೆಂಡತಿ 'ಹೋಗಲಿ ಪಾಪ! ಎಷ್ಟು ದಿನ ಸತಾಯಿಸೋದು?' ಎಂದು ಮರುಗಿ, ಇದ್ದಕ್ಕಿದ್ದಂತೆ ಮನೆಗೆ ಮರಳಿದಾಗ ಸಂತೋಷಾಶ್ಚರ್ಯಾತಿರೇಕದಿಂದ ಗಂಡ, 'ಇದೇನೆ ? ಇಷ್ಟೊಂದು ದಿನ ಕೂತುಬಿಟ್ಟೆ ತವರು ಮನೇಲಿ? ....ಅಂತೂ ಬಂದ್ಯಲ್ಲಾ....' ಎಂದ.

ಹೆಂಡತಿ ಅಣಕು ಗಾಂಭೀರ್ಯದಿಂದ, 'ಹೂಂ....ನಿಮಗೊಂದಿಷ್ಟು ಬುದ್ಧಿ ಬರಲಿ ಅಂತ ಸ್ವಲ್ಪ ತಡವಾಗೇ ಬಂದೆ', ಎಂದಳು.

ಕೊಂಬೆಯ ಮೇಲೆ ಕರುಳು ಇಟ್ಟು ಬಂದ ಕೋತಿಯಂತೆ ಗಂಡ ಪರಿತಾಪ ಪಟ್ಟುಕೊಂಡು, 'ಅಯ್ಯೋ ! ಮೊದಲೇ ಹೇಳಿಹೋಗಬಾರದಿತ್ತೇನೆ ? ಕಡೇ ಪಕ್ಷ, ಹೋದ ಮೇಲಾದ್ರೂ ವಿಷಯ ಹೀಗೆ ಅಂತ ಒಂದು ಕಾರ್ಡ್ ಆದ್ರೂ ಹಾಕಬೋದಿತ್ತಲ್ಲ ! ಎಂಥಾ ಅನ್ಯಾಯವಾಗ್ಹೋಯ್ತು !....'

'ಯಾಕೇಂದ್ರೆ? ಏನಾಗಿದೆ? ಏನೇನೋ ಮಾತಾಡ್ತಿದೀರಲ್ಲಾ?' ಎಂದು ಹೆಂಡತಿ ಹೋಲ್ಡ್ಆಲ್ ಬಿಚ್ಚಲು ಹೋದಳು.

ಗಂಡ ತಕ್ಷಣ, 'ಬೇಡ, ಬಿಚ್ಚಬೇಡ...... ಮತ್ತ್ಯಾರು ಅದನ್ನೆಲ್ಲಾ ತಿರುಗಿ ಕಟ್ಟೋರು? ನೀನೀಗ ಮತ್ತೆ ತವರು ಮನೆಗೆ ಹೋಗ್ಬೇಕು. ನಿನ್ನ ಉದ್ದೇಶ ಸಫಲವಾಗಬೇಕಾದ್ರೆ........ನೀನು ಮೊದ್ಲೇ ಒಂದು ಮಾತು ತಿಳಿಸ್ಬಿಟ್ಟಿದ್ರೆ ಅನ್ಯಾಯವಾಗಿ ಎರಡೆರಡು ಸಲ ಬಸ್‌ಚಾರ್ಜ್ ತೆರೋದನ್ನ ತಪ್ಪಿಸಬಹುದಾಗಿತ್ತು!' ಎಂದ.

ಸಂತೋಷದ ಸಮಾಚಾರ

ಬೆಲೆಗಳು ಗಗನಕ್ಕೇರದೆ ಇದ್ದರೆ
(ದುಡಿಮೆಯು ಪ್ರತಿದಿನ ಹೆಚ್ಚುತಲಿದ್ದರೆ)
ಪ್ರತಿದಿನ ಔತಣ, ಸಿನಿಮಾ ರಾತ್ರೆ
ಫ್ರಿಜ್ಜು, ಟೀವೀ, ಸ್ಟೀಲಿನ ಪಾತ್ರೆ
ಪ್ರತಿಹಬ್ಬಕ್ಕೂ ಹೊಸ ಸೀರೆಗಳು
(ನಾಚಬೇಕು ಸಿನಿಮಾ ತಾರೆಗಳು)
ಬೆಲೆಗಳು - ಸದ್ಯ - ಮುಟ್ಟಿವೆ ಸಗ್ಗ
ಎನ್ನುವ ಕಾರಣವೊಂದೇ ಅಗ್ಗ.

ಶಿವಕುಮಾರ್

ಬೆಳಗಾವಿಯ ಪುರಸಭಾ ಸದಸ್ಯರು ಬೆಳಗಾವಿಯನ್ನು ಮಹಾರಾಷ್ಟ್ರಕ್ಕೇ ಸೇರಿಸಬೇಕೆಂದು ಠರಾವು ಪಾಸು ಮಾಡಿದ್ದಾರೆ. —ಸುದ್ದಿ

ತಮಿಳುನಾಡಿನ ತಮಿಳು ಸೇನೆಯ ಸಿಪಾಯಿಗಳು ಶ್ರೀಲಂಕಾ ತಮಿಳು ನಾಡಿನ ಸಾಗರೋತ್ತರ ಪ್ರದೇಶವೆಂದು ಠರಾವು ಪಾಸು ಮಾಡಬಹುದಲ್ಲವೇ? —ಮಾರ್ಕೋಪೋಲೊ

ಹರಿಕಥಾ ಪ್ರಕರಣವು

—ರಾವಿ

ಇವತ್ತು ಕ್ಲಬ್ಬಿನಲ್ಲಿ ಹರಿಕಥಾ ಕಾರ್ಯಕ್ರಮ ಅಂತ ಕೋದಂಡು ಏಳಕೊಂಡೇ ಹೋದ.

ಯಾವ ಕಥೆ ಅಂತ ಕೇಳಿದರೆ ಅದೇನೋ 'ಕೊಬ್ಬು' ಅಂತಾನೆ. ದುರ್ಯೋಧನನ ಕೊಬ್ಬೋ ದುಃಶ್ಯಾಸನನ ಕೊಬ್ಬೋ ಇರಬಹುದೆಂದುಕೊಂಡೆ. ಏನೇ ಇರಲಿ ಹರಿಕಥೆ ನಡೆಸಿಕೊಡುವವನು ಸೀನಿ. ಆದ್ದರಿಂದಲೇ ಕೋದಂಡುವಿನ ಆತುರ. ಮಹರಾಯ ಹರಿಕಥಾ ಕುಠಾರ ನೆನೆಸಿದ್ದು ಗೊತ್ತೇ ಇರಲಿಲ್ಲ.

ಕ್ಲಬ್ ಸೇರೊ ಹೊತ್ತಿಗೆ ಹರಿಕಥೆ ಶುರುವಾಗಿ ಹೋಗಿತ್ತು. ಸೀನಿ ಕೈಯ್ಯಲ್ಲಿ ಚಿಟಿಕಿಯಂಥಾದ್ದು ಏನೋ ಹಿಡಿದು ಜೀನ್ಸ್ ಟಿ ಷರ್ಟಿನಲ್ಲಿಯೇ ಹರಿಕಥೆ ನಡೆಸಿಕೊಡುತ್ತಿದ್ದಾನೆ,

ನರಕ ಯಾರಿಗೆ ?
ಹೇಳಿ ಬೇಗ—
ನರಕ ಯಾರಿಗೆ ?

ಹಸು ಹಂದಿಗಳ ಕೊಬ್ಬು ಬೆರೆಸಿದ್ದು ತಪ್ಪೋ ? ಐನ್ ವನಸ್ಪತಿಯೆಂದು ಮಾರಿದ್ದು ತಪ್ಪೊ ? ಕೊಬ್ಬನ್ನ ತರ್ಸೋಕೆ ಬಿಟ್ಟಿದ್ದು ತಪ್ಪೊ ? ತರಿಸಿದ್ನ ಬೆರಸಲಿಕೆ ಕೊಟ್ಟವರ ತಪ್ಪೊ ?

ನರಕ ಯಾರಿಗೆ ?
ಹೇಳಿ ಹೇಳಿ
ನರಕ ಯಾರಿಗೆ ?

ತಲೆ ದ್ಧುಂ ಅನ್ನಿಸುವ ರೀತಿಯಲ್ಲಿ ಸೀನಿಯ ಹಾಡುಗಾರಿಕೆ ಸಾಗಿತ್ತು. ಆಮೇಲೆ ಅವನ ಕೀರಲು ಗಂಟಲಿನವ್ಯಾಖ್ಯಾನ

ನನ್ನನ್ನು ನರಕಕ್ಕೆ ದೂಡಬ್ಯಾಡಿ, ನೀವು ನರಕಕ್ಕೆ ಹೋಗಬ್ಯಾಡಿ ಹೋಗಬ್ಯಾಡಿ ಅಂತ ತ್ರಿಪಾಠಿ ಮಹೋದಯರು ಪಾರ್ಲಿಮೆಂಟಿನಲ್ಲಿ ಬಡಕೊಂಡಿದ್ದೇ ತಡ ಅವರ ಆರ್ತನಾದ ಭರತವರ್ಷದ ದಶದಿಕ್ಕುಗಳಲ್ಲಿಯೂ ಮೊಳಗುವಂಥಾದ್ದಾಯಿತು. ಆ ಮೇಲೆ ಇಂದ್ರಲೋಕ ಚಂದ್ರಲೋಕವನ್ನೂ ತಲುಪಿತು. ಅಷ್ಟು ಮಾತ್ರವಲ್ಲ ನರಕಲೋಕವನ್ನೂ ತಲುಪಿತು. ತಲುಪಿದ್ದೇತಡ, ನರಕದ ಬಾಗಿಲನ್ನು ಇಪ್ಪಗಲ ತೆರೆಸಿಟ್ಟ ಯಮಧರ್ಮರಾಯ.

ಆಗ ಏನಾಯಿತು ? ದಿಲ್ಲಿಯವರು ಒಂದು ಕ್ಷಣ ತಬ್ಬಿಬ್ಬಾದರು. ಹಂದಿ ದನಗಳ ಕೊಬ್ಬನ್ನು ಆಮದು ಮಾಡಿಕೊಂಡು ವನಸ್ಪತಿಗೆ ಬೆರೆಸೋದಕ್ಕೆ ಬಿಟ್ಟು ಲಕ್ಷಾಂತರ ಮಂದಿಯನ್ನು ನರಕಯಾತ್ರೆಗೆ ಅಣಿಮಾಡಿದ ಮಹಾಪರಾದಕ್ಕೆ ದೋಣಿಯಾದೆವಲ್ಲ ಇದರ ಫಲಅನುಭವಿಸದೆ ಇರಲಿಕ್ಕೆ ಸಾಧ್ಯವೆ? ಮುಂದಿನ ಚುನಾವಣೆಯ ವೇಳೆಗಾದರೂ ಅನುಭವಿಸದಿರಲಿಕ್ಕೆ ಸಾಧ್ಯವೇ? ಎಂದು ಚಿಂತಾಕ್ರಾಂತರಾದರು.

ಆಗ ವಿರೋಧಪಕ್ಷಗಳವರೋ ನರಕದ ಬಾಗಿಲು ಇಪ್ಪಗಲ ತೆರೆದ ಸಮಾಚಾರ ಕೇಳಿ ಅತೀವ ಹರ್ಷ ತಾಳಿದರು.

ನರಕ ಯಾರಿಗೆ
ಹೇಳಿ
ನರಕ ಯಾರಿಗೆ
ಕೊಬ್ಬು ತರಿಸಲು ಬಿಟ್ಟ
ಕಾಂಗ್ರೆಯವರಿಗೆ
ನರಕ ಯಾರಿಗೆ
ಹೇಳಿ
ನರಕ ಯಾರಿಗೆ ?

ಎಂದು ಉನ್ಮತ್ತರಾಗಿ ಗಲಭೆಯೆಬ್ಬಿಸಿದರು. ಆಳುವ ಪಕ್ಷದ ಕೊಬ್ಬು ಕರಗಿಸಿ, ನರಕ ಭಯದಿಂದ ತತ್ತರಿಸುವ ಜನಕೋಟಿಯ ಒಲವನ್ನು ತಮ್ಮೆಡೆಗೆ ಹರಿಯುವಂತೆ ಮಾಡಬಹುದಾದ್ದಕ್ಕೆ ಅವರಿಗೆ ಬಲು ಸಂತಸ.

ಆಗ ಸರಕಾರದವರು ಸುಮ್ಮನಿರುತ್ತಾರೆಯೆ?

ನಾವಲ್ಲ ನಾವಲ್ಲ ನಾವಲ್ಲ
ನರಕ
ನಮಗಲ್ಲ ನಮಗಲ್ಲ ನಮಗಲ್ಲ
ಚರಬಿ ತರಿಸೋಕೆ ಬಿಟ್ಟಿದ್ದು ನಾವಲ್ಲ
ಮೊದಲು ಜನತಾವೆ ತರಿಸಿದ್ದು
ನಾವಲ್ಲ
ನರಕ
ನಮಗಲ್ಲ ನಮಗಲ್ಲ ನಮಗಲ್ಲ

ಎಂಬ ಮಾಮೂಲೀ ತಮ್ಮ ವರಸೆಯನ್ನು ಸಚಿವಾದಿಗಳು ಪ್ರಯೋಗಿಸುವಂಥವರಾದರು.

ಆಗ ಜನಕೋಟಿ ಏನು ಮಾಡಬೇಕು? ಚರಬಿ ಆಮದು ಮಾಡಿಕೊಂಡಿದ್ದೇನೋ ಹೌದು. ಕಾಂಗ್ರೆಯವರೇ ಇರಲಿ ಜನತಾದವರೇ ಇರಲಿ ತರಿಸಿದ ಚರಬಿಯನ್ನು ವನಸ್ಪತಿ ಮಾಡೋದಕ್ಕೆ ಬಿಟ್ಟಿದ್ದಕ್ಕೆ ನರಕ ಸೇರೆ ಸೇರ‍್ತಾರೆ. ತ್ರಿಪಾಠಿಗಳನ್ನೂ ಕೂಡ ದಬ್ಬಿಕೊಂಡೇ ಸೇರುತ್ತಾರೆ. ಆದರೆ ನಮ್ಮ ಗತಿ ಏನು? ವೋಟನ್ನು ಅವರಿಗೋ ಇವರಿಗೋ ಕೊಟ್ಟ ಮಾತ್ರಕ್ಕೆ ಚರಬಿಯಲ್ಲಿ ಸಾಮೋಸಾ ಲಡ್ಡುಗಳನ್ನು ಮಾಡಿಸಿ ತಿಂದ ಪಾತಕ ಪರಿಹಾರವಾಗುತ್ತದೆಯೆ ಎಂದು ಪೇಚಾಡತೊಡಗಿದರು ಮಹಾಜನರು.

ಆಗ ದಿಲ್ಲಿಯವರು ಜನರಿಂದ ನರಕಭಯವನ್ನು ಬಿಡಿಸದೆ ನಿರ್ವಾಹವಿಲ್ಲ ಎಂದರಿತು ಚರಬಿಯನ್ನು ಯಾವತ್ತೂ ವನಸ್ಪತಿ ತಯಾರಿಸೋದಕ್ಕೆ ಬಳಸಿದ್ದೇ ಇಲ್ಲವೆಂಬ ನವೀನ ಸತ್ಯವನ್ನು ಸಾರತೊಡಗಿದರು. ಅದು ಕೂಡ ಪೂರ್ತಿ ಫಲಕಾರಿಯೆನಿಸಲಿಲ್ಲ. ವನಸ್ಪತಿ ಗಿರಾಕಿ ಅರ್ಧಕ್ಕರ್ಧ ಇಳಿದಿದ್ದರಿಂದಾಗಿ ಅದರ ಉತ್ಪಾದಕರು ಮೊರೆಯಿಟ್ಟಿದ್ದರಿಂದ ಈ ಹೇಳಿಕೆ ಎಂಬುದಾಗಿ ವಿರೋಧಪಕ್ಷದ ಪೋಟಿಗಳು ಮೂದಲಿಸಿದರು. ಚರಬಿ ಪ್ರಕರಣದಿಂದ ಉತ್ತೇಜಿಸಲ್ಪಟ್ಟ ರಾಜನಾರಾಯಣ ಮಹೋದಯರು ಹಿಂದು ಮುಸಲ್ಮಾನ್ ಎಂಬ ಭೇದವಿಲ್ಲದೆ ಸಕಲರಿಗೂ ನರಕ ಪ್ರಾಪ್ತಿ ಗ್ಯಾರಂಟಿ ಎಂಬ ಆಶ್ವಾಸನೆ ನೀಡಿದ್ದರಿಂದ ಜನತೆ ಮತ್ತಷ್ಟು ಕಂಗಾಲು ! ವನಸ್ಪತಿ ಮಾತ್ರವಲ್ಲ ಇತರ ತೈಲಗಳಿಗೂ ಬೆರೆಸಿದ್ದುಂಟು ಎಂದ ಮೇಲೆ ಇನ್ನಷ್ಟು ಕಂಗಾಲು!

ಈಗ ದಿಲ್ಲಿಯವರು ದೇವರಾಣೆಯಾಗಿ ವನಸ್ಪತಿಯಲ್ಲಿ ಚರಬಿ ಇರುವುದು ಕಂಡುಬರಲಿಲ್ಲ ಎಂದು ಪರೀಕ್ಷಾವರದಿಗಳನ್ನು ಪಟುಂವೆ

ಇಟ್ಟರು.

ವಿರೋಧಿಗಳು ಅದನ್ನೂ ಹೀಗಳೆಯುವಂಥವರಾದರು. ಚೀಸು ಪ್ರಸಂಗವೆಂಬ ಕೆಟ್ಟ ಕನಸಿನ ದೇವರಾಣಿಯನ್ನು ಜ್ಞಾಪಿಸಿ ಕೊಟ್ಟು ಗೇಲಿ ಮಾಡಿದರು.

ಆಗ ದಿಲ್ಲಿಯವರಿಗೆ ದಿಕ್ಕೇ ತೋಚದಂತಾಯಿತು. ಸ್ವಾಮೀಜಿಯೊಬ್ಬರನ್ನು ದಿಲ್ಲಿಗೆ ಕರೆಸಿಕೊಳ್ಳುವಂಥವರಾದರು. ಈ ಚರಬಿ ವನಸ್ಪತಿ ಪ್ರಕರಣದಿಂದ ಪಾರಾಗುವ ಬಗೆ ಯಾವುದೆಂದು ಕೈಮುಗಿದು ಬೇಡಿಕೊಳ್ಳುವಂಥವರಾದರು.

ಸ್ವಾಮೀಜಿ ಆಗ—

ಅರಿಯದೆ ಸವಿದವರಿಗಿಲ್ಲವೋ । ನರಕ
ಅರಿಯದೆ ಸವಿದವರಿಗಿಲ್ಲವೋ
ಅರಿಯದೆ ಸವಿದರು ಉಂಟು ಪ್ರಾಯಶ್ಚಿತ್ತ
ನರಕವ ಸೇರದೆ ಇರಲು ಪ್ರಾಯಶ್ಚಿತ್ತ
ಅರಿಯದೆ ಸವಿದವರಿಗಿಲ್ಲವೋ । ನರಕ
ಅರಿಯದೆ ಸವಿದವರಿಗಿಲ್ಲವೋ

ಎಂದು ಅಪ್ಪಣೆ ಕೊಡಿಸುವಂಥವರಾದರು. ಆಗ ಯಮಧರ್ಮರಾಯ ನರಕದ ಬಾಗಿಲನ್ನು ಒಸಿ ಮುಚ್ಚಲೇ ಬೇಕಾಯಿತು.

ಇಂದ್ರಾದಿ ದೇವತೆಗಳು ಉಘೇ ಎಂದರು. ನರಕಭಯದಿಂದ ಪಾರಾದ ಜನಕೋಟಿಗಳೆಲ್ಲ ಹರ್ಷ ಚಿತ್ತರಾದರು.

* * *

ಹರಿಕಥೆ ಪೂರ್ತಿ ಕೇಳೋದಕ್ಕೆ ಈ ಕೋದಂಡ ಬಿಡಬೇಕಲ್ಲ. ಒಂದೇ ಸವನೆ ಸಾಕು ಹೋಗೋಣ ಅಂತ ಜಗ್ಗುತ್ತಿದ್ದ ಪುಟ್ಟರಾಯ. ಶೀನಿ ಮಂಗಳ ಹಾಡುತ್ತಿದ್ದಂತೆಯೇ ಎಳಕೊಂಡೇ ಹೋದ !



ಸಚಿವ : ಈಗಿನ ಕಾಲದಲ್ಲಿ ಸಾಲ ಕೇಳುವಾಗ ಸರ್ವಜ್ಞನ್ನ ಯಾರ್ರಿ ಜ್ಞಾಪಿಸ್ಕೊತಾರೆ ?

ಕಲಿತಿಲ್ಲ ಪಾಠ ಯಾರು

—ತ್ರ್ಯಪರ

(ದಿವಂಗತ ದ. ರಾ. ಬೇಂದ್ರೆಯವರ ಕ್ಷಮೆ ಕೋರಿ)

ಕೇಳು ಹುಡುಗಿ ಜಡೆಯುರಡ ಬೆಡಗಿ ಬೋರಾಯ್ತು ರಜೆಯು ಬರಲು
ಕಾಲೇಜಿನಲ್ಲಿ ಕ್ಯಾಂಟೀನಿನಲ್ಲಿ ಫೀಲ್ಡಿನಲಿ ನಮ್ಮ ಕೊರಲು
ಸಿಗರೇಟನೆಳೆದು ಹೊಗೆಯನ್ನು ಊದಿ ನಡೆಸಿದೆವು ಭಾರಿ ಜೋರು
ಬೆಂಚಲ್ಲಿ ಕುಳಿತು ಹೊರಬಿಟ್ಟು ಮನಸು ಕಲಿತಿಲ್ಲ ಪಾಠ ಯಾರು

ನೀನುಟ್ಟ ಸೀರೆ ಮೈ ಬಳಸಿ ನಿನ್ನ ಎಸೆದಿರಲು ನವಿಲಿನಂತೆ
ಕಣ್ಣಲ್ಲಿ ನಿನ್ನ ಮೈತುಂಬಿ ನನ್ನ ಮನದಲ್ಲಿ ಏನೋ ಚಿಂತಿ
ನೀನಿಟ್ಟ ಹರಳು ತಂತಾನೆ ಬೆಳಗಿ ಹೊಳೆದಿರಲು ತಾರೆಯಂತೆ
ಅದರೊಂದು ಕಿರಣ ಎದೆ ತಾಕಿ ನನ್ನ ಆಡಿಸಿತು ಹಕ್ಕಿಯಂತೆ

ಕೈಯಲ್ಲಿ ಬುಕ್ಕು ಕಾಲಲ್ಲಿ ಬೂಟು ತೊಡೆಯಲ್ಲಿ ಟೈಟು ಪ್ಯಾಂಟು
ಹುಡುಗಿಯರ ಮುಂದೆ ಭರಭರನೆ ನಡೆದು ಇಡಲಿಲ್ಲ ನೀಟುನೋಟು
ಜೇಬಲ್ಲಿ ಹಣವು ಮನದಲ್ಲಿ ಮುದವು ಇರೆ ನೀನು ಕಾಣಬೇಕು
ಅಲ್ಲೊಂದು ರಸ್ತೆ ಇಲ್ಲೊಂದು ಸಿನಿಮ ಅಲೆದದ್ದು ಇನ್ನು ಸಾಕು.

ಒಂದೊಂದು ವ್ರತವು ನಿಜವಿಹುದು ಕೇಳು ಬೇರಿಲ್ಲ ದಾರಿ ಗೆಳತಿ
ಅದನರಿತು ನಾವು ಮನಸಿಟ್ಟು ಕಲಿಯೆ ಒರದಿರದೆ ನಮಗೆ ನಗುವು.

ಶುಭಾಶಯಗಳೊಂದಿಗೆ—

ಎನ್. ಎಸ್. ಗಿರಿಮಾಜಿ ಎಂಡ್ ಸನ್ಸ್

(ಬೆಂಗಳೂರು)

ನಂ. 46. ಇಂಡಸ್ಟ್ರಿಯಲ್ ಸಬರ್ಬ್

ಯಶವಂತಪುರ ಬೆಂಗಳೂರು 560022

ಸ್ಕೂಪ್

—ಟಿ. ಸುನಂದಮ್ಮ

ಜೋಡಿ ಪದವೀಧರೆಯರು; ಜತೆಗೆ 'ಜರ್ನಲಿಸಮ್ ಡಿಪ್ಲೋಮಾ' ಸಂಪಾದಿಸಿಕೊಂಡಿದ್ದವರು. ಆದರೆ .....ನಿರುದ್ಯೋಗಿಗಳು.

ಹಲವು ಪತ್ರಿಕೆಗಳಿಗೆ ಪ್ರವೇಶಿಸುವ ಪ್ರಯತ್ನ ಮಾಡಿ ಸೋತು ಕೂತಾಗ ಸೋದರ ಸುಬ್ಬು ಹೇಳಿದ, "ಈ ಕಾಲದಲ್ಲಿ ಹೆಬ್ಬಾಗಿಲಿನಿಂದ ಹೊಕ್ಕೋದು ಸಾಧ್ಯವಿಲ್ಲ ಕಣ್ರೇ; ಒಂದು 'ಸ್ಕೂಪ್' ಹಿಡೀರಿ, ನಿಮ್ಮ ಬ್ರೆಡ್ಡಿನ ತುಂಡು ಬೆಣ್ಣೆಯ ಮೇಲೆ ಜಾರುತ್ತೆ."

ಅವನೇನೋ ಹೇಳಿದ; ಆದರೆ ಆ 'ಸ್ಕೂಪ್' ಏನು ಇಲಿಸುಂಡಾನೇ ಹಿಡೀಲಿಕ್ಕೆ? ಅಥವಾ ಇಲ್ಲಿ ಒಂದೂಕ ಬ್ರಹಬಾಲೇಂದ್ರ ಬ್ರಹ್ಮಚಾರಿಯೊಬ್ಬ ಇದ್ದಾನೆಯೇ ಪತ್ರಿಕೆಗೆ ಪುಟಗಟ್ಟಲೆ ಪಟಾಕಿ ಹಾರಿಸಲಿಕ್ಕೆ? ಶೋಕ ನಾಯಕಿಯರಂತೆ ನಡೆದು ರಸ್ತೆ ಸವೆಸುತ್ತಿದ್ದಾಗ ಇದ್ದಕ್ಕಿದ್ದಂತೆ ಕಿರಿಯವಳು ಕೂಗಿಕೊಂಡಳು, "ಸ್ಕೂಊಊಊ ಪ್!"

ಕಿರಿಯವಳು ಸುತ್ತಲೂ ಗಿರಿಗಿಟ್ಲೆ ತಿರುಗಿ ನೋಡಿದಳು, ಯಾವ ಗೂಂಡಾನೂ ಹೆಣ್ಣನ್ನು ಹಿಂಬಾಲಿಸಿದ್ದಾಗಲೀ ಖಳಹೈದ ಚೂರಿ ತಿರುವಿದ್ದಾಗಲೀ 'ಗುಂಡು' ತುಂಬಿಕೊಂಡು ತೂರಾಡುತ್ತಿರುವ ಗುಂಡಪ್ಪನಾಗಲೀ ಕಾಣಿಸಲಿಲ್ಲ. ಹಣೆಯ ಮೇಲೆ ಪ್ರಶ್ನಾರ್ಥಕ ರೈಲು ಹಳಿ ಮೂಡಿಸಿದಾಗ ಹಿರಿಯವಳು ಅವಳನ್ನು ಎದುರಿಗೆ ಕಾಣಿಸುತ್ತಿದ್ದ ಮನೆ ಬಳಿ ಎಳೆದುಕೊಂಡು ಹೋದಳು.

ಜಗುಲಿಯ ಮೇಲೆ ಜಜ್ಜುಗುಜ್ಜು ಅಜ್ಜಿಯ ಶವ; ಸುತ್ತಲೂ ಮುಗಿಲು ಮುಟ್ಟುವಂತೆ ಬೋರಿಟ್ಟು ಅಳುತ್ತಿರುವ ನೆಂಟರು! ಇಷ್ಟು ಹಣ್ಣಾದ ಮುದುಕಿ ಸತ್ತರೆ ಹೀಗೆ ದುಃಖ ಪಡುವುದೆಂದರೆ? ಇದರಲ್ಲೇನೋ ರಹಸ್ಯ ವಿರಲೇಬೇಕು!

ಈ ರಹಸ್ಯವನ್ನು, ಬೇತಾಳನನ್ನು ಹಿಂಬಾಲಿಸಿದ ತ್ರಿವಿಕ್ರಮನಂತೆ ಭೇದಿಸಿ ವರದಿ ಕಳಿಸಬೇಕೆಂದು ಕೂಡಲೇ ನಿರ್ಧರಿಸಿದರು ಆ ಮೊಗ್ಗು ಪತ್ರಿಕೋದ್ಯಮಿಗಳು. ಅಂತೆಯೇ ಅಜ್ಜಿಯ ಕುಟುಂಬದವರ ಸಂದರ್ಶನ ತೆಗೆದುಕೊಂಡರು, ಆದರ ವಿವರ ಹೀಗಿದೆ:—

ಪ್ರಶ್ನೆ : ಅಜ್ಜಿಗೆ ಎಷ್ಟು ವಯಸ್ಸಾಗಿತ್ತು.
ಉತ್ತರ (ಮಗ) : ತೊಂಬತ್ತೊಂದು ತುಂಬಿತ್ತು.
ಪ್ರಶ್ನೆ : ಇದ್ದಕ್ಕಿದ್ದಂತೆ ಸತ್ತರೇ?
ಉತ್ತರ : ಇಲ್ಲ; ಆರುತಿಂಗಳ ಕೆಳಗೆ ಜಾರಿ ಬಿದ್ದು ಸೊಂಟದ ಮೂಳೆ ಮುರಿದು ಕೊಂಡರು, ಆಗ

ನೆಲ ಹಿಡಿದವರು ಈಗ ಮೂರು ತಿಂಗಳಿಂದ ಪ್ರಜ್ಞೆಯನ್ನೂ ಕಳೆದು ಕೊಂಡಿದ್ದರು. 'ಕೋಮಾ' ಅಂದರು ಡಾಕ್ಟರು.

ಪ್ರಶ್ನೆ : ಏನು ಆಹಾರ ತೆಗೆದುಕೊಳ್ಳುತ್ತಿದ್ದರು?

ಉತ್ತರ : ಮೂಗಿಗೆ ಕೊಳವೆ ತುರುಕಿ ಹಾಲು ಹುಯ್ಯುತ್ತಿದ್ದೆ; ಹಾಸಿಗೆ ಬಟ್ಟೆ ನಾನೇ ಶುದ್ಧಿ ಮಾಡುತ್ತಿದ್ದೆ.

ಪ್ರಶ್ನೆ : ತೊಂಬತ್ತೊಂದು ವಯಸ್ಸಿನ ಮೂಳೆಮುದುಕ 'ಕೋಮಾ ಕೋಮಲೆ' ಕೊನೆಯುಸಿರು ಎಳೆದರೆ ಮನೆಯವರು ಬಿಡುಗಡೆಯ ನಿಟ್ಟುಸಿರು ಬಿಡುವುದು ಸ್ವಾಭಾವಿಕ. ಆದರ ಬದಲಿಗೆ ನೀವೆಲ್ಲ ಕಣ್ಣಿನಿಂದ ಜಲಪಾತ ಕಾರ್ಯಕ್ರಮ ನಡೆಸುತ್ತಿದ್ದೀರಲ್ಲ - ಈ ಸೋಜಿಗದ ಗುಟ್ಟು ಏನು ಹೇಳುವಿರಾ?

(ಈ ಪ್ರಶ್ನೆಗೆ ನಾಲ್ಕಾರು ಧ್ವನಿಗಳು ಒಟ್ಟಿಗೆ ಉತ್ತರಿಸಹೋದಾಗ, ಒಬ್ಬೊಬ್ಬರನ್ನೇ ಕೇಳುವುದಾಗಿಯೂ ಅವರು ಮಾತ್ರ ಮಾತನಾಡಬೇಕೆಂದೂ ಕೋರಲಾಯಿತು.)

ಪ್ರಶ್ನೆ : ನೀವು ಅವರಿಗೇನಾಗಬೇಕು?

ಉತ್ತರ : ಕಿರಿಮಗ. ಆಕೋ ಅವನು ನನ್ನಣ್ಣ; ಅವನೆಂದೂ ಅಮ್ಮ ನನ್ನ ಸಾಕಲಿಲ್ಲ. ನನಗೆ ಆಕೇನ ಸಾಕೋದು ಇದುವರೆಗೂ ಕಷ್ಟ ಆಗಿತ್ತು. ಈಗ ಜನರಲ್ ಆಗಿ ವೃದ್ಧಾಪ್ಯ ವೇತನ ಜಾರಿಗೆ ಬಂತಲ್ಲ? ನಮ್ಮಮ್ಮನಿಗೂ ಮಂಜೂರಾಗಿತ್ತು. ನೆಟ್ಟಗೆ ನಾಲ್ಕು ತಿಂಗಳು ತೆಗೆದುಕೊಳ್ಳಲಿಲ್ಲ... ಹ್ಹು ಹ್ಹು ಹ್ಹು ಹ್ಹು!

ಪ್ರಶ್ನೆ : ನೀನು ಯಾರಪ್ಪ?

ಉತ್ತರ : ಅವರ ಮೊಮ್ಮಗ. ಅಜ್ಜೀರಿಗೆ ಅಜ್ಜಂದಿರಿಗೆ ಸಿಟಿ ಬಸ್ ಪ್ರಯಾಣಕ್ಕೆ 'ಕನ್ಸೆಷನ್' ಕೊಟ್ಟಿದಾರಲ್ಲ ಆಂಟಿ? ಪಾಪ ಅಜ್ಜಿ ನಮ್ಮ ನಗರ ಪೂರ್ತಿ ನೋಡೇ ಇರಲಿಲ್ಲ, ತೋರಿಸ್ತೀನಿ ಅಂತ ಹೇಳಿದ್ದೆ; ಅವರ ನೆಪದಲ್ಲಿ ನಾನೂ ನಗರ ದರ್ಶನ ಮಾಡೋಣ ಅಂತಿದ್ದೆ... ಹ್ಹು ಹ್ಹು ಹ್ಹು ಹ್ಹು...

ಪ್ರಶ್ನೆ : ನೀವು...?

ಉತ್ತರ : ಅಜ್ಜೀ ಸೋದರ ಸೊಸೆ. ನಂಗೆ ಗುಳಪಾಪಟೆ ಪಾಕ ಹಾಕಕ್ಕೆ ಬರಲ್ಲ. ಅತ್ತೆ ಆಗಾಗ್ಗೆ ಮಾಡಿ ಇಟ್ಟಿರೋರು, ನಾನು ಬಂದಾಗಲೆಲ್ಲ ನನಗೆ ಗುಳಪಾಪಟೆ ನುಂಗಿಸೋರು. ಇನ್ನು ಮೇಲೆ... ಹ್ಹು ಹ್ಹು ಹ್ಹು ಹ್ಹು....!

ಪ್ರಶ್ನೆ : ...ಅಜ್ಜಿಯ ಹಿರಿಮಗ ಅಂತ ಈಗ ತಾನೆ ತಿಳೀತು; ನೀವು ಆಕೇನ ನಿಮ್ಮ ಹತ್ತಿರ ಎಂದೂ ಇರಿಸಿಕೊಂಡಿರ್ಲಿಲ್ಲ ಅನ್ನೋದು ಗೊತ್ತಾಯ್ತು. ಅಂದಮೇಲೆ ನಿಮಗೂ ಅವರಿಗೂ... ಕ್ಷಮಿಸಬೇಕು .... ಹೆಚ್ಚಿನ ವಾತ್ಸಲ್ಯ ಬಂಧನ ಇರಲಾರದು, ಆದರು

ಸಹ ನೀವು ಇಷ್ಟೊಂದು ಚಿಕ್ಕಾ ಇದೀರಲ್ಲಾ?

ಉತ್ತರ : ನೋಡಿ ತಾಯೀ (ಹುಡುಗಿಯರು ಬೆಚ್ಚಿಬಿದ್ದರು) ನಮ್ಮೂರಲ್ಲೊಂದು ಅಪರೂಪ ಸಂಸ್ಥೆ ಸ್ಥಾಪಿಸಿದೀವಿ. ಮನುಷ್ಯರದು, ಸಂಘದ್ದು, ಸಂಸ್ಥೇದು, ರಜತೋತ್ಸವ – ವಜ್ರೋತ್ಸವ – ಮರಣೋತ್ಸವ–ಸಂಸ್ಮರಣೋಣೋತ್ಸವ, ಆಚರಿಸೋದೇ ಅದರ ಧ್ಯೇಯ. ನಾನು ಇನ್ನು ಐದು ವರ್ಷಕ್ಕೆ... ನಮ್ಮಮ್ಮನ ಶತಮಾನೋತ್ಸವ ನಡೆಸಿಕೊಡುತ್ತೀನಿ ಅಂತ ಅಧ್ಯಕ್ಷರಿಗೆ ಕಾರ್ಯಕಾರಿ ಸಮಿತೀಗೆ ಆಶ್ವಾಸನೆ ಕೊಟ್ಟಿದ್ದೆ. ಆದರೆ ಅಮ್ಮ ಕೈ ಕೊಟ್ಟುಬಿಟ್ಟಳು.... ಹ್ಹ ಹ್ಹ ಹ್ಹ ಹ್ಹ...!

ಪ್ರಶ್ನೆ : ನೀವು.... ಅಜ್ಜಿಗೇನು ಸಂಬಂಧ ಮೇಡಂ?

ಉತ್ತರ : ಸೊಸೆ.

ಪ್ರಶ್ನೆ : ಸೊಸೆ? ಮಕ್ಕಳು ಮೊಮ್ಮಕ್ಕಳು ದುಃಖಪಡಬಹುದು ; ಆದರೆ ಸೊಸೆ...!

ಉತ್ತರ : ಹ್ಹ ಹ್ಹ ಹ್ಹ ಹ್ಹ ...ನಮ್ಮ ಮಹಿಳಾ ಸಮಾಜದಲ್ಲಿ ಅದರ ಬೆಳ್ಳಿಹಬ್ಬದ ಸಲುವಾಗಿ ಒಂದು 'ವೃದ್ಧಗೃಹ' ತೆರೀಬೇಕು ಅಂತಿದಾರೆ. ಎಲ್ಲ ಮೆಂಬರುಗಳೂ ಡೊನೇಷನ್ ಕೊಡಬೇಕೆಂದು ಕೇಳಿಕೊಂಡಿದಾರೆ. ನಾನು.... ನಮ್ಮತ್ತೆಮ್ಮನ್ನ...... 'ವೃದ್ಧಗೃಹ'ಕ್ಕೆ ಡೊನೇಟ್ ಮಾಡಬೇಕೊಂತಿದ್ದೆ...ಹ್ಹಹ್ಹಹ್ಹ!

* * *

ಮೊಗ್ಗು ಪತ್ರಿಕೋದ್ಯೋಗಿಣಿಯರು ಅರಳಿದರು.

'ಅಪರಂಜಿ'ಯ ನಾಲ್ಕನೇ ಸಂಚಿಕೆಯಲ್ಲಿ ಸಂಸ್ಕೃತ ನಗೆಹನಿಯನ್ನು ಕನ್ನಡಕ್ಕೆ ತಂದ ಡಾ. ಕೆ. ಕೃಷ್ಣಮೂರ್ತಿಯವರು, 'ಶಿಕ್ಷಕರು, ನಟರು, ಜೋಯಿಸರು, ವೈದ್ಯರು. ಶ್ರೋತ್ರಿಯರು—ಇವರ ಅಗಲವಾದ ಬಾಯಿಗಳು, ಈ ವಿಶಾಲವಾದ ಜಾಗಗಳು ಇಲ್ಲದಿದ್ದರೆ ವ್ಯಾಕರಣವೆಂಬ ಭೀಕರ ಸಿಂಹಕ್ಕೆ ಹೆದರುವ ಅಪಶಬ್ದಗಳೆಂಬ ಮೃಗಗಳಿಗೆ ಸಂಚರಿಸಲು ಎಲ್ಲೂ ಜಾಗವಿಲ್ಲ–ಎಂದಿದ್ದಾರೆ,

—ಯಾಕೆ, ಆ ಕಾಲದಲ್ಲಿ 'ಉದಯೋನ್ಮುಖ' ಸಾಹಿತಿಗಳು ಇರಲಿಲ್ಲವೆ?

—ಮಾರ್ಕೊಪೋಲೋ

ರಾ.ಶಿ. ದರ್ಶನ

—ಜ್ಯೋತ್ಸ್ನಾ ಕಾಮತ

ಮಲ್ಲೇಶ್ವರಂದ 'ದತ್ತಪ್ರಸಾದ'ದಲ್ಲಿ ಬಿಡಾರ ಹೂಡಿದಾಗ ನಮ್ಮ ವಾಸಸ್ಥಾನ ಇರುವದೆಲ್ಲಿ ಎಂದು ಇತರರಿಗೆ ಹೇಳುವದು ಕಷ್ಟಕ್ಕಿಟ್ಟುಕೊಳ್ಳುತ್ತಿತ್ತು. ಮಲ್ಲೇಶ್ವರದ ರೇಲ್ವೆ ನಿಲ್ದಾಣದ ಹತ್ತಿರವೆಂದರೆ ಅದು ದಕ್ಷಿಣಕ್ಕಾಗುತ್ತಿತ್ತು. ಎಮ್. ಈ. ಎಸ್. ಕಾಲೇಜಿನ ಪಕ್ಕವೆಂದರೆ ತೀರ ಉತ್ತರಕ್ಕೆ ಆಗಿ ಬಿಡುತ್ತಿತ್ತು. ಹನ್ನೆರಡನೇ ಅಡ್ಡರಸ್ತೆ ಅನ್ನೋಣವೆಂದರೆ ಅದು ಬರೇ ಗೇಣುದ್ದ ಇದ್ದುದರಿಂದ ಅರಿತವರು ಅತ್ಯಲ್ಪ ಜನ ರಿದ್ದರು. ಡಾ॥ ಶಿವರಾಮ್ ಅವರ ಮನೆಯ ಹತ್ತಿರದಲ್ಲಿಯೇ ಎಂದರೆ ಡಾಕ್ಟರ್ ಬೋರ್ಡ್ ಇದ್ದ ಬೇರೆ ಯಾರದೋ ಮನೆಗೆ ಹೋಗುತ್ತಿದ್ದರು. ಬರಹಗಾರ ರಾ.ಶಿ. ಅವರ ಮನೆಯ ಸಮೀಪವೆಂದಾಗ ಹಲವರಿಗೆ ಅರ್ಥವಾಗತೊಡಗಿತು. 'ಕೊರವಂಜಿ' ಸಂಪಾದಕರು ಎಂದಾಗ ಹೆಚ್ಚಿನವರಿಗೆ ದತ್ತ ಪ್ರಸಾದದ ಸ್ಥಾನ ತಕ್ಷಣ ಅರ್ಥವಾಗು ವಂತಾಯಿತು.

ರಾ.ಶಿ. ಯವರ ಸಾನ್ನಿಧ್ಯದಲ್ಲಿ ನಾವು ವಾಸಿಸುತ್ತಿದ್ದೇವೆ ಎಂದು ಅರಿತದ್ದು ಆಕಸ್ಮಿಕ. ಹನ್ನೆರಡನೆ ಅಡ್ಡರಸ್ತೆ, ಆರನೇ ಮುಖ್ಯ ರಸ್ತೆ ಸೇರುವಲ್ಲಿ ವಿಸ್ತಾರವಾದ ಒಂದು ಮನೆ. ಸಣ್ಣ ಹೂದೋಟದ ಅಂಚಿನಲ್ಲಿ ಎತ್ತರವಾಗಿ ಬೆಳೆದುನಿಂತ ಸಂಪಿಗೆ ಮರ, ಮಾವಿನ ಮರಗಳು. ಅವುಗಳ ನಡುವೆ ಅಪರೂಪದ ಇರುಳರನೆಯನ್ನು ಹೋಲುವ ಹೂಗಳ ಮರ. ಅದು ಕೆಲ ದಿನ ಮಾತ್ರ ಪುಷ್ಪಭರಿತವಾಗಿರುತ್ತಿತ್ತು. ಅದರ ಮಧುವಿನ ರುಚಿಯರಿತ ಕರಿ ಬಣ್ಣದ ಚಿಟ್ಟೆಗಳು ಜೇನ್ನೊಣಗಳಂತೆ ಮುತ್ತುತ್ತಿದ್ದವು. ಉದ್ಯಾನಗಳಲ್ಲಿ ಬರುವ ಪತಂಗಗಳು ಹತ್ತಾರು ಜಾತಿಯವು ಇದ್ದು, ಅವು ಕ್ಷಣಾರ್ಧದಲ್ಲಿ ಮಾಯವಾಗಿ ಬಿಡುತ್ತವೆ. ಆದರೆ ಇವು ಒಂದೆಡೆ ಸ್ಥಾಯಿಯಾಗಿದ್ದು ಹೂವಿನಿಂದ ಹೂವಿಗೆ ಹಾರುತ್ತ ಮಧು ಪಾನದಿಂದ ಮತ್ತವಾಗಿರುತ್ತಿದ್ದವು. ಅವನ್ನು ನೋಡುತ್ತಿದ್ದಂತೆ, ಉತ್ತರ ಅಮೇರಿಕೆಯಿಂದ ದಕ್ಷಿಣ ಅಮೇರಿಕೆಗೆ ವಲಸೆ ಹೋಗುವ ಪತಂಗಗಳು, ಹೀಗೆ ಒಂದೇ ವೃಕ್ಷಕ್ಕೆ ಅಂಟಿಕೊಂಡಿರುತ್ತವೆ ಎಂದು ಓದಿ ಛಾಯಾಚಿತ್ರ ನೋಡಿದ್ದು ನೆನಪಾಯಿತು. ಜೊತೆಗೆ "ಕೀಟಪ್ರಿಯ" (ಯಜಮಾನರ ಅನ್ವರ್ಥಕ ನಾಮ)ರು ಇದ್ದರೆ ಇವನ್ನು ನೋಡಿ ಎಷ್ಟು ಆನಂದಿಸುತ್ತಿದ್ದರೋ, ಛಾಯಾಚಿತ್ರ ತೆಗೆಯುತ್ತಿದ್ದರೋ, ಎಂದು ಕನವರಿಸುವಂತೆ ಆಯಿತು. ಆಗವರು ದೂರದ ಮಧ್ಯಪ್ರದೇಶದ ಗುಡ್ಡಗಾಡಿನಲ್ಲಿ ಸಂಚರಿಸುತ್ತಿದ್ದರು.

ಮರುದಿನವೂ ಅದೇ ದಾರಿಯಿಂದ ಹೊರಟಾಗ ಪತಂಗಗಳ ಪ್ರಮಾಣ ಕಡಿಮೆಯಾಗಿತ್ತು. ಹತ್ತಾರು ಕುಮಾರಿಯರು

ಕಣ್ಣು ಮುಚ್ಚಾಲೆ ಆಡುತ್ತಿದ್ದರು. ಅವರು ಧರಿಸಿದ ಸಮವಸ್ತ್ರಗಳಿಂದ, ಇಂಗ್ಲೀಷ್ ಮಾಧ್ಯಮ ಶಾಲೆಯಿಂದ ಆಗಷ್ಟೇ ಹಿಂದಿರುಗಿದ್ದಾರೆ ಎಂದು ಸೂಚಿಸುವಂತೆ ಇದ್ದರೂ ಅವರೆಲ್ಲ ಕನ್ನಡದಲ್ಲಿ ಕೂಗಾಡಿ-ರೇಗಾಡುವುದನ್ನು ಕೇಳಿ ಅಚ್ಚರಿಯಾಯಿತು. ಬೆಂಗಳೂರಿನಲ್ಲಿ ಸ್ಥಿತಿವಂತರ ಜೊತೆಗೆ ಅವರನ್ನು ಅನುಕರಣೆ ಮಾಡುವ ಮಧ್ಯಮ ವರ್ಗದವರೆಲ್ಲ ಇಂಗ್ಲಿಷಿನಲ್ಲಿ ಮಾತನಾಡುವದನ್ನೇ ಅಭ್ಯಾಸ ಮಾಡಿಕೊಂಡು ಬಿಟ್ಟಿದ್ದಾರೆ. ಎಷ್ಟೋ ಬಾರಿ ಇಂಗ್ಲಿಷ್ ಸರಿಯಾಗಿ ಬಾರದ ತಂದೆ-ತಾಯಂದಿರು ಮಕ್ಕಳೊಡನೆ ಆ ಭಾಷೆಯಲ್ಲಿಯೇ ಸಂವಾದಿಸುವುದು ಮೋಜಿನದಾಗಿರುತ್ತದೆ. ಹೀಗಿದ್ದಾಗ ಈ ಮಕ್ಕಳು ಹೀಗೇಕೆ? ಎಂದು ವಿಸ್ಮಯ ಪಡುವಾಗ ಮಧ್ಯ ವಯಸ್ಕ ಗೃಹಿಣಿಯೋರ್ವಳು ಹಿರಿಯರೋರ್ವರನ್ನು ಸಾವಕಾಶವಾಗಿ ಹೊರಗೆ ಕರೆತಂದು ಹೂದೋಟದ ಮಧ್ಯದಲ್ಲಿ ಬೆತ್ತದ ಕುರ್ಚಿಯಲ್ಲಿ ಕೂಡಲು ನೆರವು ನೀಡಿದಳು. ಕೈಯಲ್ಲಿ ಬೆತ್ತ ಕೊಟ್ಟು, ಬೇಕಾದಾಗ ಹೇಳಿಕಳಿಸಲು ಸೂಚಿಸಿ ಮಹಿಳೆ ಮನೆಯೊಳಗೆ ನಡೆದಳು.

ಹಿರಿಯರ ಸ್ವಾಸ್ಥ್ಯ ಚೆನ್ನಾಗಿಲ್ಲವೆಂದು ಮೇಲುನೋಟಕ್ಕೇ ಅರಿವಾಗುವಂತೆ ಇತ್ತು. ಹುಲುಸಾಗಿ ಬೆಳೆದಿದ್ದ ಹುಬ್ಬುಗಳ ಆಶ್ರಯದಲ್ಲಿ ದಪ್ಪ ಚಾಳೀಸಿನ ಫ್ರೇಮು ನಿಂತಿತ್ತು. ಎಡಗಣ್ಣಿಗೆ ಬಿಳಿ ಪಟ್ಟಿ ಹಾಕಿಕಟ್ಟಿದ್ದರಿಂದ ನೇತ್ರ ಚಿಕಿತ್ಸೆ ಮಾಡಿಕೊಂಡಿರಬೇಕು ಎನಿಸಿತು. ನೀಳ ಮೂಗು, ದಪ್ಪ ತುಟಿ, ಭಾರಿದೇಹದವರಾಗಿದ್ದರೂ, ಭವ್ಯತೆ ಲವಲವಿಕೆಗಳು ಎದ್ದು ತೋರುತ್ತಿದ್ದವು. ಚಿತ್ತ ಸ್ವಾಸ್ಥ್ಯಕ್ಕಾಗಿ ಮಕ್ಕಳ ಆಟವನ್ನು ಒಂಟಿಗಣ್ಣಿನಿಂದಲೇ ನೋಡಿ ಆನಂದಿಸುತ್ತಿದ್ದರು. ಹುಡುಗಿಯರಾದರೂ, ತಾತನಿಗೆ ಏನಾದರೂ ಸಹಾಯ ಬೇಕೇ ಎಂದು ಮತ್ತೆ ಮತ್ತೆ ವಿಚಾರಿಸಿ ಆಟವನ್ನು ಮುಂದರಿಸುತ್ತಿದ್ದರು. ಆಗೊಮ್ಮೆ ಈಗೊಮ್ಮೆ ಮೋಸ ! ಬರೀ ಮೋಸ ! ಎಂದು ನ್ಯಾಯದಾನಕ್ಕೆ ತಾತನತ್ತ ಓಡಿಬರುತ್ತಿದ್ದರು. ಈ ಸನ್ನಿವೇಶದಿಂದ ವೃದ್ಧರಿಗೆ ತಮ್ಮ ಬಾಲ್ಯದ ದಿನಗಳು ನೆನಪಾಗುತ್ತಿದ್ದಿರಬೇಕು. ಮಕ್ಕಳ ತಲೆ ನೇವರಿಸಿ, ಬೆನ್ನು ತಟ್ಟಿ, "ಆಟ ಆಟಕ್ಕಾಗಿಯೇ ಹೊರತು ಜಗಳ ಕಾಯುವುದಕ್ಕಲ್ಲ. ನೀನು ಹಿರಿಯಳು ತಾನೇ? ಚಿಕ್ಕವರ ಮಾತನ್ನು ಒಪ್ಪಿಕೊಳ್ಳುವುದರಲ್ಲಿ ಜಾಣತನವಿದೆ'' ಎಂದು ಜಹಾಂಗೀರನ ನ್ಯಾಯದಾನ ನೀಡಿ, ಅವರು ತಿರುಗಿ ಆಟ ಪ್ರಾರಂಭಿಸಿದಾಗ ನೋಡಿ ಅಭಿಮಾನದಿಂದ ನಕ್ಕರು. ಕರಿ ಪತಂಗಗಳು ಯಾವ ಭಯ-ಭೀತಿಗಳು ಇಲ್ಲದೇ ಮಧುಪಾನ ಮುಂದರಿಸಿದ್ದವು. ಇದೊಂದು ಆಧುನಿಕ ಋಷಿಯ ಆಶ್ರಮವಿರಬಹುದೆ? ಎಂದು ಅನುಮಾನ ಪಡುತ್ತಿರುವಾಗ, ನಡುಬೀದಿಯಲ್ಲಿ ನಿಂತಿದ್ದು ಅರಿವಾಗಿ, ಲಗುಬಗೆಯಿಂದ ನಡೆದು ಮನೆ ಸೇರುವಂತಾಯಿತು.

ಮರುದಿನ ಸಹೋದ್ಯೋಗಿಗಳೊಡನೆ ಈ ಅನುಭವ ಹೇಳಿಕೊಂಡಾಗ, ಅರ್ಥವಾದವರಂತೆ ನಕ್ಕು, "ಅವರಾರು ಗೊತ್ತೇ? ಪ್ರೇಮ, ಕರುಣೆ, ಅಂತಃಕರಣಗಳ ರಾಶಿ,

ರಾಶಿ! ಮಹಿಳೆ, ಅವರ ಮಗಳಿರಬೇಕು. ಆಡುತ್ತಿದ್ದ ಹುಡುಗಿಯರಲ್ಲಿ ಒಬ್ಬಿಬ್ಬರು ಅವರ ಮೊಮ್ಮಕ್ಕಳಿರಬೇಕು. ಉಳಿದ ಮಕ್ಕಳು ಸಹಪಾಠಿಗಳಿರಬೇಕು' ಎಂದಾಗ ಸಂಕೋಚವಾಯಿತು, ಫೋನ್ ಮಾಡಿ, ವೇಳೆ ಗೊತ್ತುಪಡಿಸಿ, ಅವರನ್ನು ಕಾಣಲು ಹೋಗುವುದಕ್ಕಿಂತ ಈ ರೀತಿಯ ದರ್ಶನವೇ ಹಿತವೆನಿಸಿತು. ನಂತರ ಮನೆಗೆ ಹೋಗಲು ಬಳಸುವದು ಅದೊಂದೇ ದಾರಿ. ಅಪರಿಚಿತಳಿದ್ದರೇ ನಿರೀಕ್ಷಣೆಗೆ ಸಹಾಯವಾಗುತ್ತದೆಂದು ಹೊಸ್ತಿಲುದಾಟಿ ಒಳಗೆ ಹೋಗಲೇ ಇಲ್ಲ. ಪ್ರತಿದಿನವೂ ೨-೩ ನಿಮಿಷ ಅವರ ಚಟುವಟಿಕೆಗಳನ್ನು ಕುತೂಹಲದಿಂದ ನೋಡದಿದ್ದರೆ ಆ ದಿನ ಅಪೂರ್ಣವೆನಿಸುತ್ತಿತ್ತು. ಅವರ ಮನೆ ವಿಸ್ತಾರವಾಗಿದ್ದರೂ ಎಡಗಡೆಯ ಒಂದು ರೂಮನ್ನು ತಮ್ಮ ಬಳಕೆಗಾಗಿ ಇಟ್ಟುಕೊಂಡಿದ್ದರು. ಅದಕ್ಕೊಂದು ವಾತನಿಯಂತ್ರಣಯಂತ್ರ ಜೋಡಿಸಿದ್ದರು. ಹಾಸಿಗೆಯ ಹಿಂದಿನ ಕಪಾಟುಗಳಲ್ಲಿ ರಾಶಿ ರಾಶಿ ಪುಸ್ತಕಗಳು. ಹಂಬಲಿಸಿ ಒಂದು ಪುಸ್ತಕ ಎತ್ತಿಕೊಂಡರೆ, ಐದು ನಿಮಿಷಕ್ಕಿಂತ ಹೆಚ್ಚು ಓದಲಾಗುತ್ತಿರಲಿಲ್ಲ.

ರಾಶಿಯವರ ಆರೋಗ್ಯ ಇಂಥ ಸ್ಥಿತಿಯಲ್ಲಿದ್ದರೂ ಅದರ ನಗೆ ಮತ್ತು ಲಘು ಬರಹಗಳು ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಲೇ ಇರುವದನ್ನು ನೋಡಿ ಆಶ್ಚರ್ಯವಾಗುತ್ತಿತ್ತು. ಮಗಳು, ಶ್ರಮವಹಿಸುವುದು ಬೇಡವೆಂದು ಪರಿಪರಿಯಾಗಿ ಹೇಳಿದರೂ ಕೆಲ ಸಾಲುಗಳನ್ನು ಬರೆಯದೇ ಇರುತ್ತಿರಲಿಲ್ಲ. ತಮ್ಮ ದೈಹಿಕ ತೊಂದರೆಯಿಂದಾಗಿ ಬರವಣಿಗೆ ಮಾಡಲಾಗುವುದಿಲ್ಲವೆಂದು ಅವರೆಷ್ಟು ಕೊರಗುತ್ತಾರೋ ಎಂದು ನಿತ್ಯವೂ ಅನಿಸುತ್ತಿತ್ತು. ಕೊನೆಗೊಮ್ಮೆ ಕುಟುಂಬದ ವೈದ್ಯರ ಸಲಹೆಯ ಮೇರೆಗೆ ಬರವಣಿಗೆಗೆ ಸಂಪೂರ್ಣ ತಿಲಾಂಜಲಿ ಕೊಡಬೇಕಾಯಿತು. ಬಾಯಿಂದ ಹೇಳಿ ಮಗಳಿಂದ ಬರೆಸುವ ಪರಿಹಾರ ಪ್ರಾರಂಭಿಸಿದರು. ಹೀಗೆ ಮಾಡಿದರೂ ಅವರಿಗೆ ತುಂಬ ದಣಿವಾಗುತ್ತದೆಂದು ಅರಿತು ಅವರ ಹಿತದ ದೃಷ್ಟಿಯಿಂದಲೇ ಇದನ್ನೂ ನಿಲ್ಲಿಸಿರಲು ಸಾಕು. ಅಂತೆಯೇ ಬರವಣಿಗೆಯನ್ನು ಶಾಶ್ವತವಾಗಿ ಬೀಳ್ಕೊಂಡ ಪತ್ರವನ್ನು ಸಂಪಾದಕರಿಂದ ಬರೆಯಿಸಿ ಕೈತೊಳಕೊಂಡರು. ಈ ಕೊನೆಯ ಲೇಖ ಪತ್ರ ಬರೆದಾಗ ಅವರ ಆತ್ಮಕ್ಕೆ ಎಷ್ಟೊಂದು ನೋವಾಗಿರಬಹುದು ಎಂದು ನೆನೆಸಿಯೇ ಕಣ್ಣುಗಳು ತೇವವಾದವು.

ವೃತ್ತಿಯಿಂದ ವೈದ್ಯರು, ಆದರೆ ಎಂಥ ಶ್ರೇಷ್ಠ ಲೇಖಕರಿಗೂ ಕಡಿಮೆಯಿಲ್ಲದ ಬರವಣಿಗೆ, ಕನ್ನಡಿಗರನ್ನು ನಗಿಸಬೇಕು ಎಂಬ ಏಕಮೇವ ಉದ್ದೇಶದಿಂದ 'ಕೊರವಂಜಿ' ಪತ್ರಿಕೆ ಪ್ರಾರಂಭಿಸಿ, ದೀರ್ಘಕಾಲ ನಡೆಸಿದರು. ಟಿ.ಸುನಂದಮ್ಮ ದಾಶರಥಿ ದೀಕ್ಷಿತ್, ಅ. ರಾ. ಸೇ. ಅಂತಹ ಉತ್ತಮ ನಗೆ ಬರಹಗಾರರ ತಂಡವನ್ನೇ ಆ ಮೂಲಕ ಬೆಳಕಿಗೆ ತಂದರು, ಯುವಲೇಖಕರನ್ನೆಲ್ಲ ಎಷ್ಟೊಂದು ಪ್ರೋತ್ಸಾಹಿಸುತ್ತಿದ್ದರು! ಚುಚ್ಚು ಮದ್ದುಕೊಟ್ಟು. ವೈದ್ಯಕೀಯ ಸಂಪಾದನೆಯಿಂದ ಜೀವನ ನಡೆಸಬೇಕಾದ ದಿನಗಳಲ್ಲೂ 'ಕೊರವಂಜಿ'ಯ ಕಿರಿಯ ಲೇಖಕರಿಗೆ ಕೂಡ ಕೈತುಂಬ ಗೌರವಧನ ನೀಡುವ ಹೃದಯವಂತಿಕೆ ಅವರದಾಗಿತ್ತು. ಇಂದು ಅವರ ಹೃದಯಮಿಡಿತ ನಿಂತು ಹೋಗಿದೆ. ಆದರೆ ಹೃದಯವಂತಿಕೆ ಕನ್ನಡ ಓದುಗ-ಬರಹಗಾರರಲ್ಲಿ ಜೀವಂತವಾಗಿ ಮುಂದರಿಯಲೆಂಬುದೇ ಒಂದು ಆಸೆ.

ಕೊರವಂಜಿ ರಾ. ಶಿ.

—ದಾಶರಥಿ ದೀಕ್ಷಿತ್

'ಕೊರವಂಜಿ' ನಮಗೆಲ್ಲಾ ದೊಡ್ಡ ಆಲದ ಮರದಂತೆ ಆಶ್ರಯ ಕೊಟ್ಟಿತ್ತು. ನಾ. ಕಸ್ತೂರಿ–ಡಾ॥ ಎಂ. ಶಿವರಾಂ ಅವರು ನೆಟ್ಟ ಸಸಿ ನಮ್ಮ ಕಾಲಕ್ಕೆ ಪಸಂದಾಗಿ ಸೊಗಸಾಗಿ ಬೆಳೆಯುತ್ತಿತ್ತು.

ನನ್ನ ಮೊದಲ ಕಥೆ ಕೊರವಂಜಿಯಲ್ಲಿ ಪ್ರಕಟವಾದಾಗ (ಬಹುಶಃ 1946-47) ನನಗಾದ ಆನಂದ ಹೇಳತೀರದು. ಆಗ ಪ್ರಾರಂಭವಾದ ನನ್ನ ಕೊರವಂಜಿಯ ರಾ.ಶಿ. ಅವರ ಸ್ನೇಹ ಅವರು ಕಡೆಯುಸಿರು ಬಿಡುವ ವರೆಗೆ ಹಾಗೇ ಇತ್ತು.

ತೊಂದರೆಯಲ್ಲಿದ್ದಾಗ ಖಾಯಿಲೆಯಾದಾಗ ಚಿಕಿತ್ಸೆ ಮಾಡಿದವರು. ಎಲ್ಲಕ್ಕೂ ಹೆಚ್ಚಾಗಿ ' ತಿಳಿನಗೆ ' ಬರೆಯಬಲ್ಲ ಲೇಕಖರ ಬಳಗವನ್ನೇ ಗುರುತಿಸಿ ತನ್ನ ಮಡಿಲಲ್ಲಿ ಹಾಕಿಕೊಂಡು ಮಕ್ಕಳಂತೆ ಸಾಕಿದವರು. ಕೊರವಂಜಿ ಸಾಕುತಂದೆ ಡಾ॥ಶಿವರಾಂ.

ಈಕೆ ಹುಟ್ಟಿದ್ದು ಬೆಳೆದದ್ದು, ಕಡೆಗೆ ಕಣ್ಣಿಗೆ ಕಾಡಿಗೆ ಬಳಿದುಕೊಂಡು ಕಾಡಿಗೆ ಬಳಿದುಕೊಂಡು ಕಾಡಿಗೆ ಹೋದದ್ದರ ವಿಚಾರ 'ಮಂಗಳಂ, ಶುಭಮಂಗಳಂ' ಎಂಬ ಕೊನೆಯ ಸಂಚಿಕೆಯಲ್ಲಿ, ' ಹೋಗ್ಬಿಟ್ಟು ಬರ್‍ತಿಯಣಮ್ಮಾ-ಕಾಗದ ಬರೀತಿರು' ಎಂದು ಅವಳ ಸೋದರ ಸೋದರಿಯರಿಂದ ಬರಿಸಿದ ಪತ್ರಗಳೂ ಎಲ್ಲಾ ಇವೆ. ಯಾರಾದರೂ ಅದು ಸಿಕ್ಕರೆ ನೋಡಿದರೆ ಓದಿದರೆ ಕೊರವಂಜಿಯ ಸೂಕ್ಷ್ಮಚಿತ್ರ ಸಿಕ್ಕುತ್ತದೆ.

ಕೊರವಂಜಿ ಮಗಳು ಅಪರಂಜಿ. ಕಾಡಿನಲ್ಲೇ ಹುಟ್ಟಿದವಳು. ಕೊರವಂಜಿ ಮಠದ ಶಿಷ್ಯರೊಬ್ಬರಾದ 'ಅ.ರಾ.ಸೇ.' ಎಂಬ ನಗೆಗಾರ 'ಅಪರಂಜಿ' ಯನ್ನು ನಾಡಿಗೆ ತಂದು ಸಿಹಿ ಹಂಚಿದಂತೆ ತಿಳಿನಗೆ ಹಂಚುತ್ತಿದ್ದಾರೆ, ಇನ್ನು 'ಅಪರಂಜಿ'ಯನ್ನು ಸಾಕುವುದು ಕನ್ನಡದ ತಿಳಿನಗೆ ಪ್ರಿಯರ ಕರ್ತವ್ಯ. ಅದಿರಲಿ ಇದು ಅಪರಂಜಿಯ ವಿಷಯವಾಯ್ತು.

ಕೊರವಂಜಿಯ ಸಾಕುತಂದೆ ಡಾ॥ರಾ.ಶಿ. ಅವರಿಗೆ ಪ್ರತಿಯೊಂದರಲ್ಲೂ ಆಸಕ್ತಿ. ಬಗ್ಗ ಕಂಡರೂ ಅದರಲ್ಲಿ ತಿಳಿನಗೆ ತೆಗೆಯಬಹುದೆ ಎಂಬ ಜಾಯಮಾನದವರು. ಬರೀ ತಾನು ಆಯ್ತು ತಮ್ಮ ಓದು, ತಮ್ಮ ರೋಗಿಗಳು, ತಮ್ಮ ಬರಹಗಳಲ್ಲೇ ಮುಳುಗಿದ ಕಾಡುಜೀವಿ ಅಲ್ಲ. ತಮ್ಮಂದಿರನ್ನೂ ಬೆಳಕಿಗೆ ಕೊರವಂಜಿ ಮೂಲಕ ಹೊರತಂದವರು.

ಶಕುಂತಲೆಯಂತಹ ಕಾಡುಹುಡುಗಿಯನ್ನ ಸಾಕಿ ಕಾಡಿಗೆ ಕಳಿಸಿದ ಕಣ್ವ ಋಷಿ. (ದುಷ್ಯಂತನ ಆಸ್ಥಾನವೂ ಶಕುಂತಲೆಗೆ ಕಾಡಿ

ನಂತೆಯೇ ಆಯಿತಲ್ಲವೆ!) ಈ ತರಹ ತ್ಯಾಗ ಎಲ್ಲರಿಗೂ ಬರುವುದಿಲ್ಲ. ವೇದಾಂತಿಗಳಿಂದ ಸಾಧ್ಯ. ಇದು ಒಂದು ತರಹ ತೀರಾ ಬೇಕಾದವರನ್ನು ಬಿಟ್ಟು ಸನ್ಯಾಸ ತೆಗೆದುಕೊಳ್ಳುವಂತಹ ತ್ಯಾಗವೇ.

ಕಡೆಯ ಕೊರವಂಜಿಯ ಸಂಚಿಕೆಯಲ್ಲಿ ಅವರು ಹೀಗೆ ಬರೆದರು—

"ಹಸ್‌ಕೆ ಲೇಂಗೆ ಆತ್ಮಜ್ಞಾನ್
ಮನನ್ ಕರ್ಕೆ ಬ್ರಹ್ಮಜ್ಞಾನ್"

ಬಾಳನ್ನೇ ವಕ್ರ ದೃಷ್ಟಿಯಿಂದ ನೋಡಿದರೆ, ವೇದಾಂತದ ತಿರುಳು ಸಿಗುತ್ತದೆ. ನಗುನಗುತ್ತಾ ಸುಲಭವಾಗಿ ಕಲಿಯಬಹುದಾದ ವೇದಾಂತದ ತಿರುಳು "ಆತ್ಮ" "ಪರಮಾತ್ಮ" "ಜೀವಾತ್ಮ" ಇತ್ಯಾದಿಮಾತುಗಳ ಸಂಕೋಲೆಯನ್ನೂ ಹಾಕಿಕೊಳ್ಳದೆಯೇ ಸತ್ಯದರ್ಶನ ಮಾಡಬಹುದು. ಈಗಿನ "ಮುಂದೇನು" ಎಂಬುದರ ಅರಿವಿಲ್ಲದೆ ಬಾಳಿಗೆ ನೆಮ್ಮದಿಯಿಂದಿರಲು ಮೇಲೆ ಕಾಣಿಸಿದ ಚುಟುಕವನ್ನು ಹೇಳಿದರು.

ಇದು ಕೊರವಿಯ ಅಂತರಂಗದ ತಿರುಳು. ಕೊಂಚಬೇಗ ಕಾಡಿಗಟ್ಟಿದರು-ಅವಳಿಗೊಂದು ಗಂಡು ಸಿಗ್ತಾ ಇರಲಿಲ್ಲವೆ? ಯಾವೊನಾದರೂ ಯೋಗ್ಯ ವಗೆಗಾರನಿಗೆ ಗಂಟುಹಾಕಿ ಅವರ ಸಂಸಾರ ನೋಡುತ್ತಾ ಇರಬಾರದಾಗಿತ್ತೆ ಮುದುಕ! ಹಿಡಿದದ್ದೆ ಹಟ— ಇವಳಿಂದ ನಷ್ಟ ಎಂಬ ಅಪವಾದ ಬಂದಾಗ ಸೀತೆಯಂತೆ ಹೊರಟು ಹೋದಳು ಕೊರವಂಜಿ.

ಇಷ್ಟೆಲ್ಲ ನಮಗೆ ಎದೆಗುದಿ ಹಚ್ಚಿ ಎಂದೂ ಹಿಂದಿರುಗದವರಾಗಿ ಆರಾಮ ಮಂಚದಮೇಲೆ ಮಲಗಿದ್ದರು ಭೀಷ್ಮಾಚಾರ್ಯರಂತೆ.

ಈ ದುಃಖದ ಸೂತಕದ ದಿನಗಳಲ್ಲಿ (ಅವರಿಗೆ 'ಸೂತಕ' ಶಬ್ದ ಬಹುಪ್ರಿಯ—) ಏನು ನಗೆ ಎಲ್ಲಿಂದ ತರುವುದು!

ಅವಳಳುವಿನಲ್ಲಿ ತಿಳಿನಗೆ ತರಲು ಯತ್ನಿಸುತ್ತಿದ್ದೇನೆ.

ಮಧುರೆಯ ಸರಕಾರಿ ಆಸ್ಪತ್ರೆಯ ಸರ್ಜನ್‌ಗಳು ತಮ್ಮ ಎರಡು ದಿನಗಳ ಸತ್ಯಾಗ್ರಹವನ್ನು ಕೊನೆಗಾಣಿಸಿ ಮರಳಿ ಕೆಲಸಕ್ಕೆ ಬಂದಿದ್ದಾರೆ. —ಸುದ್ದಿ

—'ಈ ಜೀವನ ಎರಡು ದಿನಗಳ ಆಟ, ಎಲ್ಲಾ ನಶ್ವರ'—ಎಂದು ರೋಗಿಗಳು ನಿಟ್ಟುಸಿರು ಬಿಟ್ಟರಂತೆ.

—ಮಾರ್ಕೋಪೋಲೋ

ರಾ.ಶಿ. ನಾನು ಕಂಡಂತೆ

—ಕೇಫ

ರಾ. ಶಿ. ಯವರ ಬಗ್ಗೆ ಬರೆಯಬೇಕೆಂದರೆ ನನ್ನಂತ ಅವರಿಂದ ಬರೆಯುವುದನ್ನು ಕಲಿತವನಿಗೆ ಕಷ್ಟವೆ. ಏಕೆಂದರೆ ರಾ ಶಿ. ಯವರನ್ನು ಎಲ್ಲ ವಿಧದಲ್ಲೂ ಹೊಗಳುವುದೊಂದು ಬಿಟ್ಟರೆ ಮತ್ತೇನೂ ಬರೆಯಲಾರೆವು, ಆದರೆ ರಾ. ಶಿ. ಎಂತಹ ಹೊಗಳಿಕೆಗೂ ಹೊರತಾಗಿ ಎತ್ತರಕ್ಕೆ ನಿಂತಿದ್ದ ವ್ಯಕ್ತಿ. ವೈದ್ಯನಾಗಿ, ನಗೆಗಾರನಾಗಿ, ಸಾಹಿತಿಯಾಗಿ, ವೇದಾಂತಿಯಾಗಿ ಸಾಧಾರಣ ಮನುಷ್ಯರ ಪ್ರತಿಷ್ಠೆಗಳಿಂದ ಕಳಚಿಕೊಂಡಿದ್ದರು. ಅವರೊಂದಿಗೆ ಹಲವು ವರ್ಷಗಳು ಒಡನಾಡಿ, ಅವರ ಗಮನದೊಳಗೆ ನಾವಿದ್ದುದೇ ನಮ್ಮ ಪುಣ್ಯವೆಂದೆಣಿಸುವವರಲ್ಲಿ ನಾನೂ ಒಬ್ಬ.

ನಾನು ಹೈಸ್ಕೂಲಿನಲ್ಲಿ ಓದುತ್ತಿದ್ದಾಗಲೇ ಡಾಕ್ಟರ್ ಎಂ. ಶಿವರಾಂ, ನಮ್ಮ ಮನೆಯ ಡಾಕ್ಟರಾಗಿದ್ದರು. ಅನೇಕ ವೇಳೆ ಅವರಲ್ಲಿ ಚಿಕಿತ್ಸೆ ಪಡೆದಿದ್ದೆ. ಮೆಡಿಕಲ್ ಸ್ಕೂಲ್ ಸೇರಿದೆನೆಂದು ಕೇಳಿ ಬೆನ್ನು ತಟ್ಟಿದ್ದರು. ನನಗಾಗ ಸದಾ ವಿಷಲ್ ಹಾಕುವುದೊಂದು ದುರಭ್ಯಾಸವಿತ್ತು. ಒಂದು ಬಾರಿ ಅವರು ಒಳಗೆ ಪೇಷೆಂಟನ್ನು ನೋಡುತ್ತಿದ್ದಾಗ ನಾನು ಹೊರಗೆ ವರಾಂಡಾಲಿ ನಿಂತು ಶಿಳ್ಳು ಹಾಕುತ್ತಾ ಇದ್ದೆ.

" ಯಾರವನು ವಿಷಲ್ಹಾಕ್ತಾ ಇರೋನು? " ಅಂತ ಒಳಗಿಂದ ಕೂಗು ಬಂತು, ವಿಷಲ್ ನಿಲ್ಲಿಸಿದೆ.

" ಕೇಶವನಾ ? " ಅಂದರು.

" ಹೌದು ಸರ್ " ಅಂದೆ.

"You are going to be a doctor. Learn to be decent in your behavior" ಅಂದರು ಒಳಗಿಂದಲೇ.

ಆಮೇಲೆ ಹೊರಗೆ ಬಂದು ನನ್ನನ್ನೊಳಗೆ ಕರೆದುಕೊಂಡು ಹೋದರು. ನಾನು ಹೋಗಿದ್ದ ವಿಷಯ ಮುಗಿಸಿದ ಮೇಲೆ – " ಕೇಶವಾ– ನೀನು ಡಾಕ್ಟರಾದ ಮೇಲೆ ಈ ರೀತಿ ನೋಡ್ಕೋರ್ಬಂದಲ್ಲಾ ಶಿಳ್ಳೆ ಹೊಡೀತಿದ್ರೆ ಮದೆ ತಿಂತೀ " ಅಂದ್ರು.

ಅದೇ ನನ್ನ ವಿಷಲ್ಲಿನ ಕಡೆಯ ದಿನ. ಈ ನನ್ನ ಐದು ವರ್ಷದ ಮೊಮ್ಮಗ ಶಿಳ್ಳೆ ಹೊಡಿಯೋದು ಕಲ್ತಿದ್ದಾನೆ. ಅವನು ಶಿಳ್ಳೆ ಹೊಡೆದಾಗೆಲ್ಲಾ ರೇಗೋ ಹಾಗಾಗುತ್ತೆ.

ನಾನು ಮೆಡಿಕಲ್ ಎರಡನೆಯ ವರ್ಷಕ್ಕೆ ಕಾಲಿಟ್ಟಾಗ, ಒಂದು ದಿನ ಅವರಲ್ಲಿಗೆ ಹೋಗಿದ್ದೆ. ಸೆಂಟ್ರಲ್ ಕಾಲೇಜಿನ ಕೆಲವು ಸ್ಟೂಡೆಂಟ್ಸ್ ಇದ್ದರು, ಅವರೆಲ್ಲರೂ ಡಾಕ್ಟರಲ್ಲಿ Physiology ಹೇಳಿಸಿಕೊಳ್ಳಲು ಬಂದಿದ್ದರು. " ನಾನೂ ಬರಲೇ ? " ಅಂತ ಕೇಳಿದೆ. " ನೀನು ಕೇಳಿ ಬರ್ಬೇಕೇ ? ಸಾಯಂಕಾಲ ಏಳರ ಮೇಲೆ ಬಾ " ಅಂದರು. ಅವರಿಂದ ನಾನು ಕಲಿತ Physiology

ನನಗೆ ತಳಪಾಯವಾಯ್ತು. ಏಕೆಂದರೆ ನನ್ನ ಕ್ಲಾಸಿನಲ್ಲಿ ನನಗೇನೂ ಅರ್ಥವಾಗಿರಲಿಲ್ಲ.

ನಾನು ವೈದ್ಯನಾದ ಮೇಲೆ ಅನೇಕ ವೇಳೆ ನನ್ನ ಸಂಶಯ ನಿವಾರಣೆಗೆಂದು ಅವರಲ್ಲಿಗೆ ಹೋಗುತ್ತಿದ್ದೆ. ಒಂದು ಬಾರಿ ನಾನು ಹೋದಾಗ ನನ್ನ ಕೈಗೆ "ಕೊರವಂಜಿ" ಕೊಟ್ಟರು.
"ಇದು ನಂದೇ ಅಪರಾಧ ಕಣೋ, ಓದು. ನೀನೂ ಪೇಷಂಟುಗಳನ್ನ ನೋಡ್ತೀಯಲ್ಲಾ. ಇಲ್ಲಿಗೆ ಬಂದು ಹರಟತೀಯಲ್ಲ–ಬರೀ ಹಾಗೇ ಕೊರವಂಜಿಗೆ" ಅಂದರು.

ನನ್ನ ತಾಯಿ ಬೆಂಗಳೂರಿಗೆ ಬಂದಾಗ ಲೆಲ್ಲಾ ಮಾಲೂರಿನಲ್ಲಿ ಮೇಷ್ಟರಾಗಿದ್ದ ನನ್ನ ತಂದೆ ಸ್ವಯಂ ಅಡಿಗೆ ಮಾಡಿಕೊಳ್ಳುತ್ತಿದ್ದುದು ಜ್ಞಾಪಿಸಿಕೊಂಡು–"ಸ್ವಯಂಪಾಕ" ಅಂತ ಒಂದು ಹರಟೆ ಬರೆದುಕೊಟ್ಟೆ. ಮೊದಲ ಪ್ಯಾರಾ ಓದಿದರು.
"ಅನ್ನ :- ಅಕ್ಕಿಯನ್ನು ಪಾತ್ರೆಯಲ್ಲಿ ಹಾಕಿ, ಮೇಲೆ ಮೂರು ಬೆರಳಿನಷ್ಟು ನೀರು ಸುರಿದು ಒಲೆಯ ಮೇಲೆ ಕಾಯಿಸಿದರೆ ಮಲ್ಲಿಗೆ ಹೂವಿನ ಹಾಗೆ ಅನ್ನವಾಗುತ್ತೆ" ಅಂತ ಬರೆದಿದ್ದೆ.
"ತಿಂದರೂ ಮಲ್ಲಿಗೆ ಹೂವಿನಂತಿರುತ್ತೆ" ಅಂತ ಸೇರಿಸು– ಅಂದರು.
ಮುಂದೆ ಒಬ್ಬಟ್ಟಿನ ವಿಷಯ ಬರೆದಿದ್ದೆ.
"ಒಬ್ಬಟ್ಟು :- ಹೂರ್ಣವನ್ನು ಹಿಟ್ಟಿನೊಳಗಿಟ್ಟು ತಟ್ಟಿ ತವದ ಮೇಲೆ ಕಾಯಿಸಿ. ಹೂರಣ :- ಒಬ್ಬಟ್ಟಿನೊಳಗೇ ಇರುವ ಪದಾರ್ಥ" ಅಂತ ಬರೆದಿದ್ದೆ.
"ಭೇಷ್ ಕಣೋ – You have a sence of humour. ಇನ್ನು ಮುಂದೆ – ಒಬಟ್ಟನ್ನ ಮನಸ್ಸು ಮಾಡಿಕೋ – ಹೂರಣ is the brain– ಬರೀ –ನಿಲ್ಲಿಸಬೇಡ" ಅಂದ್ರು.

ನನ್ನ ಕೊರವಂಜಿಯ ನಂಟು ಶುರುವಾಯ್ತು. ನನ್ನ "ಯಾತ್ರಿಕರ ಪತ್ರ"ದಲ್ಲಿ ಬಂದಿದ್ದ ಒಂದು ಪ್ರಸಂಗದಿಂದಾಗಿ ಅಂದಿನ ವಿಧಾನಸಭೆಯಲ್ಲಿ ಮಂತ್ರಿಗಳಾಗಿದ್ದ ಶ್ರೀ ಚೆನ್ನಿಗ ರಾಮಯ್ಯನವರು 'ಕೊರವಂಜಿ' ಯನ್ನು ಸಭೆಯಲ್ಲಿ ಹರಿದ ದಿನ – ಆಗ ಅವರ ನರ್ಸಿಂಗ್ ಹೋಂನಲ್ಲಿ ಡಾಕ್ಟರಾಗಿದ್ದ ನನ್ನನ್ನ ಕುರ್ಚಿ ಸಮೇತ ಎತ್ತಿ ಹೊಗಳಿದ್ದರು.

ನಾನು ಡಾಕ್ಟರ್ ಮಹದೇವನ್ ಅವರ ಕ್ಯಾಪ್ ಫಾರ್ಮಸಿಯಲ್ಲಿ ಕೆಲಸ ಮಾಡುತ್ತಿದ್ದವನು - ನನ್ನ ಹಿಂದಿನ ಗುಟ್ಟಹಳ್ಳಿ ಕ್ಲಿನಿಕ್‌ನ ಪುನಃ ಶುರು ಮಾಡುವಾಗ ನನಗೆ ಧೈರ್ಯ ಹೇಳಿ ಅವಶ್ಯಕವಾದ ಔಷಧಿಗಳಿಗಾಗಿ ರೂ. 300/– ಕೊಟ್ಟಿದ್ದರು. (ವರ್ಷಗಳು ಕಳೆದ ಮೇಲೆ ನಾನೇ ಅವರಿಗೆ ಡ್ರಾಫ್ಟ್ ಕಳ್ಸಿದೆ. ಪ್ರಾಯಶಃ ರಾ.ಶಿ. ಮರೆತೇ ಬಿಟ್ಟಿದ್ದರು.)

ನಾನು ಶಿವಮೊಗ್ಗೆಯಲ್ಲಿದ್ದಾಗ ನನಗೆ ಪೋಸ್ಟ್ ಮೂಲಕ ಅವರ ಸಾಕ್ಷಿ ಸಂಕಲಿಕೆ ಕಳ್ಸಿದರು. ಅದರಲ್ಲಿ "ಚಿ. ರಾ. ಡಾ. ಎ.ವಿ. ಕೇಶವ್–

ಆದರ ಪೂರ್ವಕ

೩೦. ೧. ೬೪ ಎಂ. ಶಿವರಾಂ
ಬೆಂಗಳೂರು.

ಅಂತ ತಾವೇ ಬರೆದಿದ್ದಾರೆ. ಅದು ನನ್ನ ಅಪೂರ್ವ ಆಸ್ತಿ.

ನಾನು ಬೆಂಗಳೂರು ಬಿಟ್ಟಮೇಲೆ–ನಾನು ನಗರಕ್ಕೆ ಬಂದಾಗಲೆಲ್ಲಾ ರಾ.ಶಿ. ಯವರನ್ನು ಅವರ ಮನೆಯಲ್ಲಿ ಭೇಟಿ ಮಾಡುತ್ತಿದ್ದೆ. ಪ್ರತಿ ಸಾರಿಯೂ ಆತ್ಮೀಯವಾಗಿ ನನ್ನ ಹೆಂಡತಿ ಮಕ್ಕಳ ಬಗ್ಗೆ ವಿಚಾರಿಸುವರು. ನನ್ನ ಮಗ ಚಿ. ರಮೇಶ್ M.D. Pathology ಪಾಸು ಮಾಡಿದ ವಿಷಯ ತಿಳಿಸಿದೆ.

"Very Good he has opted out of the ratrace. Atleast as a doctor he knows what he is doing with out duping the pationts" ಅಂದಿದ್ರು

"ಕೊರವಂಜಿ" ಕಾಡಿಗೆ ಹೋಗಿ 12 ವರ್ಷಗಳ ನಂತರ "ನೆನಪು" ಎಂಬ ಕವನ ಬರೆದು "ಸುಧಾ"ಕ್ಕೆ ಒಂದು ಹಸ್ತಪ್ರತಿ ರಾ. ಶಿ.ಯವರಿಗೆ ಒಂದು ಪ್ರತಿ ಕಳಿಸಿದ್ದೆ. ಅದನ್ನು ಓದಿ ಮೆಚ್ಚಿ ಪತ್ರ ಬರೆದಿದ್ದರು.

ಎಂಟು ತಿಂಗಳ ಹಿಂದೆ ರಾ.ಶಿ.ಯವರನು ನೋಡಿದ್ದೆ. ತಮ್ಮ ಆಗಿನ ದೇಹಸ್ಥಿತಿ ಯಲ್ಲೂ ಕುರ್ಚಿಯ ಮೇಲೆ ಕುಳಿತು -ಎದು ರಿಗೆ ಅದ್ವೈತ ವೇದಾಂತವನ್ನಿಟ್ಟುಕೊಂಡಿ ದ್ದರು. ಮಾತುಕತೆಯಾದ ಮೇಲೆ ನಾನು ಎದ್ದೆ.

Keshav, try not to be too disillusioned in life. A little (disillusionment) is necessary. God bless you" ಅಂದರು.

ನಾನು ನಮಸ್ಕಾರ ಮಾಡಿ–

"ಪುನಃ ಬಂದಾಗ ನೋಡುತ್ತೇನೆ ಸರ್" ಅಂದೆ.

"Hopo so" ಅಂದಿದ್ದರು.

I am hoping.........

ಒಂದೇ ಸಂಜೆ ಮೂರು ಭಾಷಣಕ್ಕೆ

ಒಪ್ಪಿದ ಭೂಪ !



ನಮಗೆಂತಹ ಸಂಶೋಧನೆ ಬೇಕು

—ಬಿ. ಎಸ್. ಚಂದ್ರಶೇಖರ್

ಸಂಶೋಧನಾ ಪ್ರೋತ್ಸಾಹ ಮಂಡಳಿ ವರ್ಷಕ್ಕೆರಡು ಬಾರಿ ಕೊಡುವ ಪ್ರಶಸ್ತಿಗಳನ್ನು ಪತ್ರಿಕೆಗಳು ದೊಡ್ಡದಾಗಿ ಪ್ರಕಟಿಸುತ್ತವೆ. ಇಲ್ಲಿ ಕೊಡುವುದು ಜುಜುಬಿ 500 ರಿಂದ 5000 ರೂಪಾಯಿ ಮಾತ್ರ. ಆದರೆ ತಮ್ಮ ತಮ್ಮ ಕ್ಷೇತ್ರಗಳಲ್ಲಿ ವಿಶಿಷ್ಟ ಸಂಶೋಧನೆಗಳನ್ನು ಬಯಸುವ, ಆ ಸಂಶೋಧನೆಗಳಿಗಾಗಿ ಎಷ್ಟು ಹಣ ಬೇಕಾದರೂ ಕೊಡಲು ಸಿದ್ಧವಿರುವ ಇತರ ನೂರಾರು ಸಂಘಸಂಸ್ಥೆಗಳಿವೆ ಎನ್ನುವುದು ನಮ್ಮ ಯುವ ವಿಜ್ಞಾನಿಗಳಿಗೆ ಗೊತ್ತಿರುವಂತೆ ಇಲ್ಲ. ಸಾರ್ವಜನಿಕ ಸೇವಾದೃಷ್ಟಿಯಿಂದ, ಈ ಸಂಸ್ಥೆಗಳ ಕೆಲವು ವಿಶೇಷ ಪ್ರಕಟಣೆಗಳನ್ನು ಇಲ್ಲಿ ಸಂಗ್ರಹಿಸಿದ್ದೇವೆ.

ದಕ್ಷಿಣ ಭಾರತ ಹೋಟೆಲ್ ಮಾಲೀಕರ ಮಹಾಸಭೆ :

ಹಿಂದಿನಕಾಲದಲ್ಲಿ ಹೋಟೆಲ್ ಕಾಫಿಯಲ್ಲಿ ಶೇಕಡ 90 ಭಾಗ ಕಾಫಿ ಕೇವಲ 10 ಭಾಗ ಮಾತ್ರ ನೊರೆ ಇರುತ್ತಿತ್ತಂತೆ. ಮಹಾಸಭೆಯ ಸದಸ್ಯರು ತಮ್ಮ ಸ್ವಂತ ಪ್ರಯತ್ನಗಳಿಂದ ಕಾಫಿಯ ಪ್ರಮಾಣವನ್ನು 10ಕ್ಕೆ ತಂದು ನೊರೆಯ ಪ್ರಮಾಣವನ್ನು 90ಕ್ಕೆ ಏರಿಸಿದ್ದಾರೆ. ಎಷ್ಟು ಪ್ರಯತ್ನಿಸಿದರೂ ಇನ್ನೂ ಮುಂದೆ ಹೋಗಲು ಆಗಿಲ್ಲ. ಈಗ ಕಾಫಿಯೇ ಇಲ್ಲದೇ ಕೇವಲ ನೊರೆಯನ್ನು ಮಾತ್ರ ಕೊಡಲು ಸಾಧ್ಯ ಮಾಡುವ ವಿಧಾನವನ್ನು ಕಂಡುಹಿಡಿದವರಿಗೆ ದೊಡ್ಡ ಮೊತ್ತದ ಬಹುಮಾನ ಕೊಡಲು ಮಹಾಸಭೆ ಮುಂದೆ ಬಂದಿದೆ.

ಅಖಿಲ ಕರ್ನಾಟಕ ವಿಫಲ ಪ್ರೇಮಿಜನ ಪರಿಷತ್ತು :

ದೇವದಾಸ ಪ್ರೇಮದಲ್ಲಿ ವಿಫಲನಾದ ಅನ್ನುವುದನ್ನು ಅವನ ಕೈಯಲ್ಲಿದ್ದ ಮದ್ಯದ ಸೀಸೆಯಿಂದ ಗುರುತಿಸುವುದು ಆಗ ಸಾಧ್ಯವಿತ್ತು. ಕುಡಿತ ಕಡ್ಡಾಯವಾಗಿರುವ ಈದಿನಗಳಲ್ಲಿ ಆಧುನಿಕ ದೇವದಾಸರನ್ನು ಹುಡುಕಲು ಬೇರೆ ವಿಧಾನಗಳು ಬೇಕಾಗಿವೆ. ವಿಫಲ ಪ್ರೇಮಿಗಳನ್ನು ಗುರುತಿಸಲು ಅನುಕೂಲವಾಗುವ ಒಂದು ವಿಧಾನ ಅವರ ಎರಡುದಿನಗಳ ಕೂಳೆ ಇರುವ ಗಡ್ಡ. ಷೇವ್ ಮಾಡಿಕೊಂಡಾಗ ಈ ಕೂಳೆ ಉಳಿಯುವುದಿಲ್ಲ. ಷೇವ್ ಮಾಡಿಕೊಳ್ಳುವುದನ್ನು ಬಿಟ್ಟರೆ ಜನತಾಪಕ್ಷದ ಅಧ್ಯಕ್ಷರಾಗಬಯಸಿರಬಹುದು ಎನ್ನುವ ಚುಚ್ಚುಮಾತು. ಈ ಪರಿಸ್ಥಿತೀಲಿ

ಷೇವ್ ಮಾಡಿಕೊಂಡಾಗ ಸರಿಯಾಗಿ ಎರಡು ದಿನದ ಗಡ್ಡ ಬಿಡುವ ಬ್ಲೇಡ್ ಅನ್ವೇಷಕರಿಗೆ ಪರಿಷತ್ತು ಸೂಕ್ತ ಪ್ರತಿಫಲಕೊಡಲು ನಿರ್ಧರಿಸಿದೆ.

ಐಕ್ಯಭಾರತ ಬಿಸ್ಕತ್ ತಯಾರಕರ ಸಂಘ :

ಗ್ಲುಕೋಸ್‌ಬಿಸ್ಕತ್ ಆಗಲಿ ಬೆಣ್ಣೆಬಿಸ್ಕತ್ ಆಗಲಿ ಅದರ ಹೂರಣ ಮರದ ಹೊಟ್ಟು ಎನ್ನುವುದು ಬಹಳ ಜನರಿಗೆ ಗೊತ್ತು. ಬಿಸ್ಕತ್ ತಯಾರಕರಿಗೆ ಮರದಹೊಟ್ಟು ಪೂರೈಸುವವರು ಈಗ ಕಲಬೆರಕೆ ಕಲಿತಿದ್ದಾರೆ. ಬಿಸ್ಕತ್ ಗುಣದ ಬಗೆಗೆ ತಯಾರಕರಿಗೆ ಗಿರಾಕಿಗಳಿಂದ ದೂರು ಬರುತ್ತಿದೆ. ಇದನ್ನು ತಡೆಗಟ್ಟಲು, ಮರದ ಹೊಟ್ಟಿನಲ್ಲಿನ ಕಲಬೆರಕೆಯನ್ನು ಗುರುತಿಸುವ ವಿಧಾನ ಬೇಕಾಗಿದೆ. ಇದಕ್ಕಾಗಿ ಸಂಘ ದೊಡ್ಡ ಪ್ರಮಾಣದಲ್ಲಿ ಹಣದ ನೆರವು ಕೊಡಲು ಸಿದ್ಧವಿದೆ.

ಉತ್ತರಭಾರತ ಅತ್ತೆಯರ ಮಂಡಲಿ :

ಹೆಚ್ಚು ಹೆಚ್ಚು ವರದಕ್ಷಿಣೆ ಬರಬೇಕಾದರೆ ಹೆಚ್ಚು ಹೆಚ್ಚು ಸೊಸೆಯರು ಬರಬೇಕು. ಅದು ಸಾಧ್ಯವಾಗುವುದು ಇರುವ ಸೊಸೆಯರ ಸಂಖ್ಯೆ ಕಡಿಮೆಯಾದಾಗ ಎನ್ನುವ ಸತ್ಯವನ್ನು ಮಂಡಲಿ ಪುನರುಚ್ಚರಿಸಬೇಕಾಗಿಲ್ಲ. ಮಂಡಲಿಯ ಈ ಉದ್ದೇಶಕ್ಕೆ ಸೀಮೆ ಎಣ್ಣೆ ಅನುಕೂಲವಾಗಿತ್ತು. ಆದರೆ ಸೀಮೆ ಎಣ್ಣೆ ಬೇಕಾದಾಗ ಬೇಕಾದ ಪ್ರಮಾಣದಲ್ಲಿ ಸಿಗುತ್ತಿಲ್ಲ. ಅತ್ತೆಯರ ಮಂಡಲಿ ಸೊಸೆ ನಿರ್ಮೂಲನಕ್ಕೆ ಸೀಮೆಎಣ್ಣೆಗೆ ಬದಲಿ ವಿಧಾನವನ್ನು ಕಂಡುಹಿಡಿದವರಿಗೆ ಭಾರಿ ಬಹುಮಾನ ಕೊಡಲಿದೆ.

ವಿಶ್ವ ಕೃತಿ ಚೌರ್ಯ ಲೇಖಕರ ಬಳಗ :
(ವ್ಯಂಗ್ಯ ಚಿತ್ರಲೇಖಕರ ಅಕಾಡಮಿಯೊಂದಿಗೆ, ಜಂಟಿಯಾಗಿ)

ಕೃತಿಚೌರ್ಯ, ಕೃತಿರಚನೆಯಷ್ಟೇ ಪುರಾತನವಾದದ್ದು ಎನ್ನುವುದನ್ನು ಎಲ್ಲರೂ ಒಪ್ಪಿಕೊಂಡಿದ್ದಾರೆ. ಒಂದು ಪತ್ರಿಕೆಯ ಸಂಪಾದಕ ವರ್ಗದವರು ಬೇರೆ ಪತ್ರಿಕೆಗಳನ್ನು ಓದುವುದಿಲ್ಲ ಎನ್ನುವ ಸ್ವಯಂ ನೀತಿಸಂಹಿತೆಯನ್ನು ಅಂಗೀಕರಿಸಿ, ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಬಂದಿರುವುದನ್ನು ಬಳಗ ಮೆಚ್ಚುತ್ತದೆ. ಆದರೆ ಕೆಲವು ಓದುಗರು, ತಾವು ಅವತ್ತು ಓದಿದ್ದನ್ನು ಅವತ್ತೇ ಮರೆಯದೇ, ಇದು ಇಂತಹ ಪತ್ರಿಕೆಯ ಇಂತಹ ಸಂಚಿಕೆಯಲ್ಲಿ ಬಂದಿತ್ತು ಎಂದು ಸಂಪಾದಕರಿಗೆ ಪತ್ರ ಬರೆಯುತ್ತಿದ್ದಾರೆ. ಇದು ಬಳಗದ ಸದಸ್ಯರಿಗೆ ಮಾನಸಿಕ ಹಿಂಸೆಗೆ, ಕೆಲವೊಮ್ಮೆ ಆರ್ಥಿಕ ನಷ್ಟಕ್ಕೆ ಕಾರಣವಾಗಿದೆ. ಹೊಸ ಪತ್ರಿಕೆ ಬಂದ ಕೂಡಲೇ ಹಳೆಸಂಚಿಕೆ ತನ್ನಷ್ಟಕ್ಕೆ ತಾನೇ ನಾಶವಾಗುವ (ಬಳಗದ ಸದಸ್ಯರ ವಿಶೇಷ ಜೋಪಾನದಲ್ಲಿರುವ ಪ್ರತಿಗಳನ್ನು ಬಿಟ್ಟು) ವಿಧಾನವನ್ನು ಬಳಗ ಬಯಸುತ್ತದೆ.

ಸರ್ಕಾರಿ ನೌಕರರ ಕ್ರಿಯಾತಂಡ :

ಸರ್ಕಾರಿ ನೌಕರರು ಕಚೇರಿಯಲ್ಲಿ ಹಾಜರಿ ಹಾಕಬೇಕೆನ್ನುವ ನಿಯಮವನ್ನು ತಂಡ ಒಪ್ಪಿಕೊಂಡಿದೆ. ಆದರೆ ಈ ಮುಖ್ಯ ಕೆಲಸ ಮುಗಿದಮೇಲೆ ನೌಕರರು ತಮಗೆ ಬೇಕಾದಲ್ಲಿಗೆ ಹೋಗಲು ಸ್ವತಂತ್ರರು ಎನ್ನುವ ತತ್ವವನ್ನು ತಂಡ ಪ್ರತಿಪಾದಿಸುತ್ತದೆ. ಹಿಂದೆ ಉದ್ಯೋಗಿಗಳು ಕಚೇರಿಗೆ ಬಂದು ಕುರ್ಚಿಗೆ

ತಮ್ಮ ಕೋಟುಗಳನ್ನು ತಗಲಿ ಹಾಕಿದರೆ ಅವರ ಹಾಜರಿ ಸಾಧಿತವಾಗುತ್ತಿತ್ತು. ಹೆಣ್ಣು ಉದ್ಯೋಗಿಗಳು ಈಗ ಟೇಬಲ್ ಮೇಲೆ ವ್ಯಾನಿಟಿಬ್ಯಾಗ್ ಹಾಗೂ ಪಕ್ಕದಲ್ಲಿ ಊಟದ ಡಬ್ಬಿಯನ್ನು ಇಟ್ಟು ತಾವು ಬಂದಿದ್ದೇವೆ ಎನ್ನುವುದನ್ನು ಪ್ರಕಟಿಸುತ್ತಾರೆ. ಆದರೆ ಇದು ಅಷ್ಟು ಪರಿಣಾಮಕಾರಿಯಾದ ವಿಧಾನವಲ್ಲ. ಎಲ್ಲರೂ ಅನುಸರಿಸಲು ಸಾಧ್ಯವಿರುವ, ಸುಲಭವಾದ ಆದರೆ ಪರಿಣಾಮಕಾರಿಯಾಗಿರುವ, ಕಚೇರಿಗೆ ಬಂದಿದ್ದಾರೆ ಎಂದು ತೋರಿಸುವ ವಿಧಾನಗಳ ಅನ್ವೇಷಕರಿಗೆ ಕ್ರಿಯಾತಂಡ ಒಂದು ಸವಾಲು ಮುಂದೆ ಇಟ್ಟಿದೆ.

ವಿಶ್ವ ಅಮ್ಮಾವ್ರ ಗಂಡಂದಿರ ಕೂಟ :

ಹೆಂಡತಿಯರಿಗೆ ಯಾವಾಗಲೂ ಗಂಡಂದಿರನ್ನು ದೂಷಿಸುತ್ತಲೇ ಇರುವ ಹಕ್ಕನ್ನು ಕೂಟ ಅನಿವಾರ್ಯವೆಂದು ಒಪ್ಪಿಕೊಂಡಿದೆ. ಆದರೆ ಈ ಮಾತನ್ನೆಲ್ಲಾ ಗಂಡಂದಿರು ಕೇಳ್ಲೇಬೇಕಿಲ್ಲ ಎನ್ನುವ ನಿರ್ಣಯವನ್ನು ಬಹಳ ವರ್ಷಗಳ ಹಿಂದೆಯೇ ನಡೆದ (ರಹಸ್ಯ) ಸಭೆಯಲ್ಲಿ ತೆಗೆದುಕೊಳ್ಳಲಾಗಿದೆ. ಆದರೆ ಈ ನಿರ್ಣಯವನ್ನು ಇಲ್ಲಿಯವರೆಗೂ ಕಾರ್ಯಾಚರಣೆಗೆ ತರಲು ಆಗಿಲ್ಲ. ಇಲ್ಲಿರುವ ಮುಖ್ಯ ತೊಂದರೆ ಬೇಡವಾದ್ದನ್ನು ನೋಡದಿರಲು ಕಣ್ಣು ಮುಚ್ಚಿಕೊಳ್ಳಲು ಸಾಧ್ಯವಿರುವಂತ ಬೇಡವಾದಾಗ ಕಿವಿಯನ್ನು 'ಆಫ್' ಮಾಡಬಲ್ಲ ಸೌಲಭ್ಯವಿಲ್ಲದಿರುವುದು. ಹೆಂಡತಿಯರಿಗೆ ತಿಳಿಯದಂತೆ ಕಿವಿಗಳನ್ನು ಮುಚ್ಚಿಕೊಳ್ಳಲು ಸಾಧ್ಯವಾಗುವ ಸಲಕರಣೆ ಕಂಡುಹಿಡಿದವರಿಗೆ ಚಿನ್ನದ ಪದಕವನ್ನು ಕೊಡಲು ಕೂಟ ಮುಂದೆ ಬಂದಿದೆ.

ಅಖಿಲ ಭಾರತ ರಸ್ತೆ ರೋಮಿಯೋಗಳ ಸಂಸ್ಥೆ :

ಹುಡುಗಿಯರನ್ನು ಚುಡಾಯಿಸುವಾಗ ಅಪರೂಪಕ್ಕೊಮ್ಮೆ ಅವರಿಂದ ಬರುವ ಕಪಾಳಮೋಕ್ಷವನ್ನು ಉದ್ಯೋಗದಲ್ಲಿರುವ ಸ್ವಾಭಾವಿಕ ತೊಂದರೆ ಎಂದು ಸಂಸ್ಥೆ ಪರಿಗಣಿಸಿದೆ. ಆದರೆ ಈ ಸೇವೆಗೆ ಚೂಪಾದ ಮೊನೆಯಿರುವ, ಎತ್ತರದ ಹಿಮ್ಮಡಿಯ ಪಾದರಕ್ಷೆಗಳನ್ನು ಬಳಸಿದಾಗ ಸಂಸ್ಥೆಯ ಸದಸ್ಯರಿಗೆ ಚಿಂತಾಜನಕವಾಗಬಹುದಾದ ಅಪಾಯವು ಒದಗಿದೆ. ಮಹಿಳೆಯರನ್ನು ಆಕರ್ಷಿಸುವ ಆದರೆ ಹೊಡೆದಾಗ ಹೆಚ್ಚು ಪೆಟ್ಟು ಕೊಡದ ಪಾದರಕ್ಷೆಗಳನ್ನು ತಯಾರುಮಾಡುವಂತ ವಿಧಾನಗಳನ್ನು ಕಂಡುಹಿಡಿದವರಿಗೆ ಸಂಸ್ಥೆ ದೊಡ್ಡ ಮೊತ್ತದ ಬಹುಮಾನ ಕೊಡಲು ಸಿದ್ಧವಿದೆ.

ಅತ್ಯಾಧುನಿಕ ವೈದ್ಯಕೀಯ ಪದ್ಧತಿಯಿಂದ ಕೇವಲ ಹದಿನೈದು ನಿಮಿಷಗಳಲ್ಲಿ ಗರ್ಭಪಾತ. —ಸುದ್ದಿ

—ಕುಂಬಾರಗೊಂದು ವರ್ಷ, ದೊಣ್ಣೆಗೊಂದು ನಿಮಿಷ.

—ಮಾರ್ಕೋಪೋಲೋ

ಬದಲಾಗದ ಕಾಲ

—ಶಿವಕುಮಾರ್

ದಿನ ಬೆಳಗಾದರೆ ಓದುವ ಸುದ್ದಿ
ಪಂಜಾಬ್ ಹಗರಣ, ರೇಗನ್ ಬುದ್ಧಿ
ಅಸ್ಸಾಂ ಕಲಹ, ದಲಿತರ ಕೋಪ
ರೇಗಿದ ರೈತರ ಆಟಾಟೋಪ
ಬೆಲೆಗಳ ಏರಿಕೆ, ಆಟೋ ಕಾಟ
ರಾಜಾರೋಷದ ಪುಂಡರ ಆಟ
ಇದ್ದರು ಇಂಥ ನಿರಾಶೆಯ ಛಾಯೆ
ಆಹಾ ನೋಡಿ ದೇವರ ಮಾಯೆ
ತಿರುಗಿಸಿ ನೋಡೆ ಚರಿತ್ರೆಯ ಪೇಜ
ತುಘಲಕ್ ನಮ್ಮನ್ನಾಳಿದ ರಾಜ !

'ಗ್ಯಾನಿ' ಜೇಲ್‌ಸಿಂಗ್, ಶೈಕ್ಷಣಿಕ ಸಂಸ್ಥೆಗಳಿಂದ ದೂರವಿರಲು ರಾಜಕಾರಣಿಗಳಿಗೆ ಕರೆ ನೀಡಿದ್ದಾರೆ. —ಸುದ್ದಿ

—'ಇದೇನು ಮಹಾ ನಮಗೆ ತಿಳಿಯದ ವಿಷಯವೆ? ಹಾಗೆ ಬಾಲ್ಯದಿಂದಲೂ ದೂರವಿದ್ದೇವೆಂಬುದರಿಂದಲೇ ಅಲ್ಲವೆ ಇಂದು ನಾವು ರಾಜಕಾರಣಿಗಳಾಗಿರುವುದು?'—ಎಂದು ಜಿ.ಎಂ. ಹಳ್ಳಿಯ ಪುಢಾರಿಗಳು ಲೊಟಗುಟ್ಟಿದರು.

—ಮಾರ್ಕೋಪೋಲೋ

ಚಾಳೀಸು ಬಂದಿತು

ಜ್ಯೋತ್ಸ್ನಾ ಕಾಮತ್

" ಪ್ರಕಾಶ (ತಮ್ಮ) ನ ಮಗಳು ಮುದ್ದಾಗಿ ಬೆಳೆಯುತ್ತಿದ್ದಾಳೆ. ಅಲ್ಲವೇ ? " ಎಂದು ನಾನು ಕೈಯಲ್ಲಿದ್ದ ಭಾವಚಿತ್ರ ನೋಡಿ ಹೇಳಿದಾಗ ಎಲ್ಲರೂ ಗಹಗಹಿಸಿ ನಕ್ಕಿದ್ದರು. ಆ ಪತ್ರ ತಮ್ಮನದಾಗಿದ್ದರೂ, ಜೊತೆಗಿದ್ದ ಫೋಟೊ, ಅದೇ ಊರಲ್ಲಿರುತ್ತಿದ್ದ ತಂಗಿಯ ಮಗನದಾಗಿತ್ತು. ಬರೇ ಮೈಯಲ್ಲಿದ್ದ ಚಿತ್ರ ಹುಡುಗನದೋ ಹುಡುಗಿಯದೋ ಎಂದು ಗುರುತಿಸಲಾಗದಿದ್ದರೆ ಚಾಳೀಸಿಗೆ ಶರಣು ಹೊಡೆಯದೇ ನಿರ್ವಾಹವಿಲ್ಲ, ಎಂದು ನನ್ನವರು ಇನ್ನೊಮ್ಮೆ ಎಚ್ಚರಿಸಿದರು. ನಾಲ್ಕಾರು ತಿಂಗಳಿನಿಂದ ಇದು ರಿಗೆ ಬಂದ ಪರಿಚಿತರು ಮುಗುಳ್ನಕ್ಕಾಗ ಅವರನ್ನು ಗುರುತಿಸುತ್ತಿರಲಿಲ್ಲ. ಅನ್ನದಲ್ಲಿ ಬತ್ತ - ಹರಳು ಜಾಸ್ತಿ, ಒಗ್ಗರಣೆ ಸೀದು ಹೋಗುತ್ತಿದೆ, ಅನ್ನದ ಬದಲಾಗಿ, ಪಲ್ಯದ ಮೇಲೆ ಸಾರು ಬಡಿಸುತ್ತಿ" ಎಂದೆಲ್ಲ ದೂರು ಬರುತ್ತಿದ್ದರೂ ಲಕ್ಷ್ಯ ಕೊಟ್ಟಿರಲಿಲ್ಲ.

ನಾನು ಕಟ್ಟಾ ಕನ್ನಡಕ ವಿರೋಧಿ. ಇದಕ್ಕೆ ಕಾರಣ ಬಹುಶಃ ಯಜಮಾನರ ಚುರುಕು ಕಣ್ಣು. ಜನಜಂಗುಳಿಯಲ್ಲಿ ಥಟ್ಟನೆ ಯಾರನ್ನೂ ಗುರುತಿಸಬಲ್ಲರು. ಚಿಕ್ಕ ಅಕ್ಷರ ಓದಬಲ್ಲರು. ಮಂದ ಬೆಳಕಿನಲ್ಲಿ ಕೆಲಸ ಮಾಡಬಲ್ಲರು. ಹೀಗಾಗಿ ಜೊತೆಯಲ್ಲಿ ಹೋಗುವಾಗ ನಾನೊಬ್ಬಳೇ ಚಾಳೀಸು ಧರಿಸಿದರೆ ನಾನೇ ದೊಡ್ಡವಳಂತೆ ಕಾಣಬಹುದು ಎಂಬ ಅಳುಕು ಬೇರೆ ! ಇತ್ತೀಚೆಗೆ ಆಫೀಸಿನಲ್ಲಿ ಚಿಕ್ಕ ಅಕ್ಷರದ ವ್ಯವಹಾರ ಪತ್ರಗಳನ್ನು ಕಿರಿ ಸಹಾಯಕರಿಂದಲೇ ಓದಿಸಿ ಬಾಯಿಂದ " ಆ್ಯಕ್ಷನ್ " ಹೇಳಿ ಬಿಡುತ್ತಿದ್ದೆ. ಅವರಿಗೂ ಇದರಿಂದ ಮಹತ್ವ ಪ್ರಾಪ್ತವಾಗಿತ್ತು. ಸಿನೇಮಾ, ಉತ್ತಮ ಮಟ್ಟ ಕಳೆದುಕೊಳ್ಳುತ್ತಿದೆಯೆಂದು ನೋಡುವದು ನಿಲ್ಲಿಸಿದೆ. ಸಮಯ ಸಾಲದೆಂದು ಸಾಮಾಜಿಕ ಚಟುವಟಿಕೆಗಳನ್ನು ನಿಲ್ಲಿಸಿದೆ, ಚಷ್ಮಾ ಧಾರಣೆ ಮುಂದೆ ಬಿತ್ತು.

ಒಮ್ಮೆ ಸ್ನೇಹಿತೆಯ ಮನೆಗೆ ಹೋಗುವದು ಅನಿವಾರ್ಯವಾಯಿತು. ಮಾತಾಡುತ್ತಾ, ತಿಂಡಿ ತಿನ್ನುತ್ತ ಓಡಾಡುತ್ತಿದ್ದಂತೆ ಕಾಲಿಗೆ ಮೃದು ವಸ್ತು ತಗಲಿತು. ಮರುಕ್ಷಣ ಕರುಳು ಕಿತ್ತುಬರುವ ಕಿರುಚಾಟ. ಸ್ನೇಹಿತೆ, ಹೂವಿನಂತೆ ಬೆಳೆಸಿದ್ದ ಪೊಮೆರಾನಿಯನ್ ಶ್ವಾನ ಶಿಶುವನ್ನು ತುಳಿದು ಬಿಟ್ಟಿದ್ದೆ. ಸಭಾಭಂಗ ಮಾಡಿದ್ದಕ್ಕೆ ಕ್ಷಮೆ ಕೋರಿ, ನಾಯಿಮರಿಯನ್ನು ಮುದ್ದಿಸಿ, ಯಜಮಾನಿಯ ತೊಡೆಯ ಮೇಲೆ ಕೂಡ್ರಿಸಿದೆ,

ಇನ್ನು ನಿರ್ವಾಹವಿಲ್ಲವೆಂದು ಡಾಕ್ಟರರ ಹತ್ತಿರ ಹೋಗಲೇಬೇಕಾಯಿತು. " ಕೇವಲ ಓದು ಬರೆಹದ ತೊಂದರೆ, ಡಾಕ್ಟ್ರೇ ಎಂದಾಗ, " ಯಸ್ ಯಸ್, ವಯಸ್ಸಾದವ

ರಿಗೆ ಈ ತೊಂದರೆ ಸ್ವಾಭಾವಿಕ " ಎಂದು ಹುಣ್ಣಿನ ಮೇಲೆ ಬರೆ ಎಳೆದರು. ಅಲ್ಲದೇ ದೂರದ್ದು, ಹತ್ತಿರದ್ದು ಒಮ್ಮೆಲೇ ಕಾಣಲು ಸಹಾಯವಾಗುವಂತೆ ಎರಡು ಕಾಚಿನ bifocal) ಚಾಳೀಸ ನಂಬರು ಬರೆದೇ ಕೊಟ್ಟರು.

ಉತ್ತಮವಾದೊಂದು ಚಾಳೀಸಿನ ಅಂಗಡಿಗೆ ಒಯ್ಯಲು ಹೇಳಿದಾಗ, ರಿಕ್ಷಾದವನು ಬಳೆಪೇಟೆಯ ಭಾರೀ ಅಂಗಡಿಯೆದುರು ನಿಲ್ಲಿಸಿದ. ಕರಿ, ಬಿಳಿ, ನಾಶಿಪುಡಿ, ಕೆಂಪು ಹಸಿರು ನೀಲಿ, ಸಣ್ಣ, ದಪ್ಪ, ತೆಳು, ಬೆಳ್ಳಿ, ಬಂಗಾರ, ಪ್ಲಾಸ್ಟಿಕ್ ತಗಡು, ಅಗ್ಗದ್ದು ಬೆಲೆಯುಳ್ಳದ್ದು ಫ್ರೇಮುಗಳನ್ನು ನೋಡಿ ಕನ್ನಡಕ ಧಾರಿಗಳು ಸಹಸ್ರಾರು ಇರುತ್ತಾರೆ, ಎಂದು ಸಮಾಧಾನ ಪಟ್ಟುಕೊಂಡೆ. ಯಾವುದನ್ನು ಆರಿಸಬೇಕು, ಎಂದು ತಿಳಿಯದೇ ಅಂಗಡಿಯವನಿಗೇ ಹೇಳಿ 50/– ರೂ ಮುಂಗಡ ಕೊಟ್ಟು ಬಂದೆ. ಎರಡು ದಿನಗಳ ನಂತರ ಕನ್ನಡಕ ಧರಿಸಿದಾಗ, ನನಗೇ ಎರಡು ದಶಕ ಹೆಚ್ಚು ವಯಸ್ಸಾದಂತೆ ಭಾಸವಾಯಿತು. ಅಂಗಡಿಯವನಿಗೆ ಹೇಳಿದಾಗ, ಆತ ತಲೆಯಲ್ಲಾಡಿಸಿ ಎಲ್ಲಾ " ಚಾಳೀಸಿನ " ವರೂ ಹೀಗೇ ಎನ್ನುತ್ತಾರೆ, ಎಂದು ಕೊಂಕು ನುಡಿದ. ಅಲ್ಟ್ರಾ ಮೊಡರ್ನ್ ಎಂದು ಅಂಗಡಿಯವನು ಮಾರಿದ ಹಳೇ ಫ್ರೇಮಿನ ಚಶ್ಮಾ ನೋಡಿ ಸಹೋದ್ಯೋಗಿಗಳು ನಕ್ಕರು.

ನನ್ನ ಸಹೋದ್ಯೋಗಿ ಮಿಸ್ಟರ್ ಮುಕ್ಕಣ್ಣ ರಾವ್ ಚಾಳೀಸಿನ ವಿಷಯದಲ್ಲಿ ವಿಶೇಷ

ಸಂಸ್ಕೃತ ನಗೆಹನಿ

ಲಕ್ಷ್ಮಿ ಪತಿವ್ರತೆ

ಕೃಷ್ಣಃ ಕ್ರೀಡಿತವಾನ್ ಗೋಭಿರಿತಿ ಗೋತುಲ್ಯ ಬುದ್ಧಿಷು ।
ಪಕ್ಷಪಾತವತೀ ಲಕ್ಷ್ಮೀರಹೋದೇವೀ ಪತಿವ್ರತಾ ॥

ಶ್ರೀಕೃಷ್ಣ ಗೋವುಗಳೊಡನೆ ಆಡುತ್ತಾ ಬಾಲ್ಯವನ್ನು ಕಳೆದ. ಇದನ್ನು ಚೆನ್ನಾಗಿ ಮನದಂದ ಮಹಾಲಕ್ಷ್ಮಿಗೆ ಯಾವಾಗಲೂ ಗೋವಿನಂತಹ ಮಂದಬುದ್ಧಿಯವರ ಮೇಲೆ ತುಂಬಾ ಮೋಹ. ನಿಜವಾಗಿಯೂ ಅವಳ ಪಾತಿವ್ರತ್ಯ ಅಸಾಮಾನ್ಯವಾದುದು.

—ಡಾ। ಕೆ. ಕೃಷ್ಣಮೂರ್ತಿ

ಪರಿಜ್ಞಾನವುಳ್ಳವರು ಹುಟ್ಟಾ ಕನ್ನಡಕ ಧರಿಸಿದ ಖ್ಯಾತಿ ಅವರದ್ದಲ್ಲದೇ ಪ್ರತಿ ಆರು ತಿಂಗಳಿಗೆ ತಪ್ಪದೇ ಚಾಳೀಸಿನಂಗಡಿಗೆ ಹೋಗುವ ರೂಢಿಯನ್ನು ಇಟ್ಟಿದ್ದಾರೆ. ತಮ್ಮ ನಾಲ್ಕು ಮಕ್ಕಳಿಗೂ ಮುಂಜಾಗ್ರತೆ ಚಷ್ಮಾ ಕೊಡಿಸಿದ್ದಾರೆ. ಅವರ ಸಲಹೆ ಪಡೆದು ಮನೆಗೆ ಎರಡು ಒಲೆ, ಎರಡು ಬಾತ್ ರೂಂ, ಎರಡು ಕಕ್ಕಸು ಅನುಕೂಲವಾಗುವಂತೆ ಎರಡು ಚಶ್ಮಾ, ಮನೆಗೊಂದು ಆಫೀಸಿನಲ್ಲೊಂದು ಅದೂ ಮುಖಕೊಪ್ಪುವದನ್ನು ತಂದದ್ದಾಯಿತು.

ಹೊಸ ಚಾಳೀಸು ಮುಖಕ್ಕೆ ಒಪ್ಪಿದರೂ ನಡೆಯುವಾಗ ನೆಲಕ್ಕುರುಳಿದಂತೆ ಭಾಸವಾಗಿ ಒಂದು ಕೈಯಿಂದ ಅದನ್ನು ಹಿಡಿಯಬೇಕು, ಎನಿಸುತ್ತಿತ್ತು. ಕಿವಿಯ ಆಧಾರ ಗಟ್ಟಿಯಾಗಿದೆ ಎಂಬ ಖಾತ್ರಿಯಾಗಿ ಕೈ ಬಿಟ್ಟಾಗ ಚಾಳೀಸು, ಮೂಗನ್ನು ಜಾರಗುಂಡಿ ಮಾಡಿ ಆಡಲಾರಂಭಿಸಿತು ! ಜಾರಿದಾಗೊಮ್ಮೆ ಅದನ್ನು ಸ್ವಸ್ಥಾನದಲ್ಲಿ ಕೂಡಿಸುವ ಕೆಲಸವನ್ನು ಕೈ ನನಗರಿಯದಂತೆ ವಹಿಸಿಕೊಂಡಿತು. ಓದು ಬರೆಹಕ್ಕೆ ಕೆಳಗಾಜಿನಿಂದ ನೋಡಿ, ದೂರದ್ದನ್ನು ಮೇಲುಗಾಜಿನಿಂದ ನೋಡಿ, ಎಂದು ಡಾಕ್ಟರರು ಹೇಳಿದರೂ, ಜಾರುವಿಕೆಯಿಂದಾಗಿ ಓದುವಾಗ ಮೇಲುಭಾಗವೂ ತಲೆಯೆತ್ತಿದಾಗ ಕೆಳಭಾಗದಿಂದ ದೂರದ ನೋಟವೂ ಎದುರಿಗೆ ಬಂದು ತೊಂದರೆ ಗಿಟ್ಟಿತು. ಕಣ್ಣೆವೆಗೆ ಬಡಿದಂತೆ, ಮೂಗಿಗೆ

ಇಕ್ಕಳ ಇಟ್ಟಂತೆ, ತಲೆಗೆ ಪೆಟ್ಟು ಬಡಿದಂತೆ. ಏನೇನೋ ಅನುಭವಗಳು. ಚಾಳೀಸು ತೆಗೆದಿಟ್ಟರೇ ಹಿತವೆನಿಸುತ್ತಿತ್ತು. ಇಂಥ ಒಂದು ಸಂದರ್ಭದಲ್ಲಿ ಅಂಚೆಯವನು ಒಂದಲ್ಲದಂತೆ ಮೂರು ಪತ್ರಗಳನ್ನು ಕೊಟ್ಟುಹೋದ. ಓದಲೆಂದು ಖುರ್ಚಿಯ ಮೇಲೆ ಕುಳಿತು ಚಾಳೀಸು ಹುಡುಕೋದ್ರೊಳಗೆ ಅಯ್ಯಯ್ಯೋ ಸತ್ತೆ ! ಎಂದು ಚಾಳೀಸಿನ ಬೊಬ್ಬೆ. ಖುರ್ಚಿಯಡಿಯಿಂದಲೇ ಬಂದುದರಿಂದ ಲಗುಬಗೆಯಿಂದ ಎದ್ದರೆ, ನನ್ನ ಇನ್ನೆರಡು ಕಣ್ಣುಗಳು ಹತ್ತು ಹೋಳಾಗಿದ್ದವು ! ಮುಕ್ಕಣ್ಣರಾವ್ ಹೇಳಿಕೆಯಂತೆ, ಮೊಟ್ಟ ಮೊದಲಿನ ಹಳೇ ಫ್ರೇಮಿನ ಚಾಳೀಸಿನಿಂದಲೇ ಕೆಲಸ ಬಗೆಹರಿಸಿದೆ. ಆಫೀಸಿಗೆ ಅದನ್ನೇ ಧರಿಸಿ ನಗಿಸಿಕೊಳ್ಳಬಾರದೆಂದು ಎರಡು ದಿನ ರಜಾ ಹಾಕಿ ಮೂರನೆಯ ಚಾಳೀಸು ಕೊಂಡು ಧರಿಸಿದೆ.


ಈ ಚಾಳೀಸಿನ ಅತ್ಯಾಧುನಿಕ ಫ್ರೇಮಿನಿಂದ ಮುಕ್ಕಾಲು ಮುಖ ಮುಚ್ಚಿ ಪರಿಚಯದವರಿಗೆ ನನ್ನ ಗುರುತು ಕೂಡಲೇ ಸಿಗುತ್ತಿರಲಿಲ್ಲ. ಆದರೆ ಇತರರ ಗುರುತು ನನಗೆ ಸಿಗುತ್ತದೆಂದುಕೊಂಡಿದ್ದೆ. ಅಪರೂಪಕ್ಕೆ ಸಿಕ್ಕ ಪ್ರಭಾಳ ಬೆನ್ನುತಟ್ಟಿ, ಮನೆಗೆ ಬಂದು ಹೋಗು ಪ್ರಭಾ, ಎಂದಾಗ, ಆಕೆ ತಬ್ಬಿಬ್ಬಾಗಿ. " ನಾನು ಪ್ರಭಾ ಅಲ್ಲ, ಪ್ರಮೀಳಾ ನಾದಿನಿ, ಮರದಾ ಅಲ್ಲವೇ ? ಎಂದಾಗ ಪೆಚ್ಚಾಗಿದ್ದೆ. " ಈಗ ಮೈಯಿಂದ ಸುಧಾರಿಸಿದ್ದಿ, ಗುರುತು ಹತ್ತಲಿಲ್ಲ ಎಂದು ತೋರಿಕೆಯ ಮಾತನಾಡಿದರೂ, ತೆಳ್ಳಗಿದ್ದವರನ್ನು ದಪ್ಪಗೆ, ಗಿಡ್ಡ ಇದ್ದವರನ್ನು ಎತ್ತರ ಮಾಡಿ ತೋರಿಸುವುದು, ಹೊಸ ಚಾಳೀಸಿನ ವೈಶಿಷ್ಟ್ಯವಾಗಿತ್ತು. ಶಾಲಾ ಚಿತ್ರಸ್ಪರ್ಧೆಯಲ್ಲಿ ಬಹುಮಾನ ಪಡೆದ ಜಿರಾಫೆ ಚಿತ್ರವನ್ನು ಮಗ ವಿಕಾಸನು ಅಭಿಮಾನದಿಂದ ತೋರಿಸಿದಾಗ, " ಒಂಟೆಯೇ, ಸುಂದರವಾಗಿದೆ ! " ಎಂದು ಅವನ ಉತ್ಸಾಹಕ್ಕೆ ತಣ್ಣೀರೆರಚಿದ್ದೆ. ಮೊದಲು ನಕ್ಕಾಗ ಮಾತ್ರ ಜಾರುತ್ತಿದ್ದ ಚಾಳೀಸು ಈಗ ಗಟ್ಟಿಯಾಗಿ ಮಾತನಾಡಿದರೂ ಗೋಣು ಹಾಕಲಾರಂಭಿಸಿತು ! ಪರಿಣಾಮವಾಗಿ ನನ್ನ ನಗು, ಗಟ್ಟಿ ಮಾತು ಒಮ್ಮೆಲೇ ಕಡಿಮೆಯಾದವು. ಇದಕ್ಕೆ ಜನ ಬೇರೆ ಬೇರೆ ಕಾರಣಗಳನ್ನು ಊಹಿಸಿದರು. ಒಂದೇ ತಿಂಗಳಿನಲ್ಲಿ ನಾಲ್ಕು ಚಾಳೀಸು ಕೊಂಡು ಗಂಡನಿಂದ ಬೈಸಿಕೊಂಡಿದ್ದಾಳೆ, ಎಂದು ನೆರೆಮನೆಯವರು ತೀರ್ಮಾನಿಸಿದರೆ, ಚಾಳೀಸು ಬಂದದ್ದರಿಂದ ಮುದಿವಯಸ್ಸಿಗೆ ತಕ್ಕಂತೆ ಗಂಭೀರವಾಗಿರಲು ಯತ್ನಿಸುತ್ತಿದ್ದಾಳೆ ಎಂದು ಸ್ನೇಹಿತೆಯರು ಸಮಾಧಾನ ಪಟ್ಟುಕೊಂಡರು. ನಗು–ಎಡಬಿಡದ ಮಾತು ಕಡಿಮೆಯಾಗಿ, ಮನೆಯಲ್ಲಿ ಕೆಲಸ ಮಾಡಲು ಅನುಕೂಲವಾಯಿತೆಂದು ಯಜಮಾನರು ಮಾತ್ರ ಗೆಲುವಾದರು. ಈ ಅನುಕೂಲತೆಯಿಂದಾಗಿ ವಾರಕ್ಕೊಂದು ಚಾಳೀಸು ಕೊಂಡರೂ ಅವರ ಅಭ್ಯಂತರವಿದ್ದಂತೆ ತೋರುತ್ತಿಲ್ಲ !

"ನಗುವು ಸಹಜ ಧರ್ಮ : ನಗಿಸುವುದು ಪರಧರ್ಮ !

ನಗುವ ಕೇಳುತ, ನಗುವುದತಿಶಯದ ಧರ್ಮ ||

ನಗುವ, ನಗಿಸುವ, ನಗಿಸಿ ನಗುತ ಬಾಳುವ ವರವ !

ಮಿಗೆ ನೀನು ಬೇಡಿಕೊಳೊ — ಮಂಕುತಿಮ್ಮ ||"



ಸಣ್ಣ ಕೈಗಾರಿಕೋದ್ಯಮಿ ಯಾರು ?

"ಸಣ್ಣ ಕೈಗಾರಿಕೋದ್ಯಮಿ ಹಲವು ಕುರುಡರು ನೋಡಿದ ಆನೆಯಂತೆ. ಕೇವಲ ಹೋರಾಟಕ್ಕಾಗಿ ಹೋರಾಡುವ ಕಾರ್ಮಿಕ ನಾಯಕನಿಗೆ, ಈತ ದಲಿತರನ್ನು ಶೋಷಿಸುವ ಕ್ರೂರರಾಕ್ಷಸ. ದೊಡ್ಡ ಕೈಗಾರಿಕೆಗಳ ಗ್ರಾಹಕರಿಗೆ, ಸಣ್ಣ ಕೈಗಾರಿಕೆ ಒದಗಿಸುವ ಸಾಮಾಗ್ರಿಗಳಿಗೆ ಹಣ ಸಂದಾಯ ಮಾಡುವ ಜರೂರು ಇಲ್ಲದಿರುವುದರಿಂದ ಈತ ಸುಲಭವಾಗಿ ಸಿಗುವ ಸಂಪನ್ಮೂಲ. ಲಂಚವಂತನಾದ ಸರ್ಕಾರಿ ಅಧಿಕಾರಿಗೆ ಈತ ಯಾವಾಗಲೂ ಸಿದ್ಧವಾಗಿರುವ ಕಾಮಧೇನು. ಸರ್ಕಾರಿ ಯೋಜನಾ ಅಧಿಕಾರಿಗಳಿಗೆ ಸಣ್ಣ ಕೈಗಾರಿಕೋದ್ಯಮಿ ನಿರುದ್ಯೋಗ ನಿವಾರಕ ತಾರಕ ಮಂತ್ರ. ಹಣ ಒದಗಿಸುವ ಬ್ಯಾಂಕ್ ಅಧಿಕಾರಿಗಳಿಗೆ, ಈತ ತನ್ನ ಉದ್ಯಮದ ಹಣಕಾಸನ್ನು ಸ್ವಂತಕ್ಕಾಗಿ ಬಳಸುವ ಕಿಲಾಡಿ. ಕಳೆದ ಒಂಭತ್ತು ವರ್ಷಗಳಿಂದ ಸಣ್ಣ ಕೈಗಾರಿಕೋದ್ಯಮವನ್ನು ನಡೆಸಿ ಇನ್ನೂ ಉಳಿದಿರುವ ನನ್ನ ಅನಿಸಿಕೆಯಲ್ಲಿ ಇಂದಿನ ಒಬ್ಬ ಸಣ್ಣ ಕೈಗಾರಿಕೋದ್ಯಮಿ ಅತ್ಯಂತ ಚತುರತೆ ಹಾಗೂ ಸಮಯ ಸ್ಫೂರ್ತಿಯನ್ನು ಪಡೆದ ಸರ್ಕಸ್ ಆಟಗಾರ."

—ಎನ್. ನರಸಿಂಹನ್